ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Wednesday, the 18th March 1981/Phalguna 27, 1902 S.E.

The House met in the Assembly Chamber, Vidhana Soudha, at Two of the Clock.

[MR. SPEAKER (SRI K. H. RANGANATH) in the Chair.]

PRESENTATION OF BUDGET

ಅಧ್ಯಕ್ಷರು.—ಮಾನ್ಯ ಹಣಕಾಸು ಸಚಿವರು ೧೯೮೧-೮೨ನೇ ಸಾಲಿನ ಆಯವ್ಯಯವನ್ನು ಈ ಸಭೆಯ ಮುಂದೆ ಮಂಡಿಸುತ್ತಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಅರ್ಥ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ೧೯೮೧-೮೨ರ......

SRI B. B. SAYANAK.—I have requested you to make provision to translate the Kannada speech into English. But you have not done it.

(*Interruption*)

SRI B. B. SAYANAK.—As a protest against this attitude, we stage a walk out.

(*The Members belonging to M.E.S. Party withdrew from the House.*)

ಶ್ರೀ ಪಂಪಾಪತಿ.—ಕನ್ನಡದಲ್ಲೇ ಭಾಷಣ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ರಾಜ್ಯದ... ..

ಶ್ರೀ ಹೆಚ್. ಗಂಗಾಧರನ್.—ಕನ್ನಡದಲ್ಲಿ ಭಾಷಣ ಮಾಡುತ್ತಿರುವುದಕ್ಕಾಗಿ ಮಾನ್ಯ ಹಣಕಾಸಿನ ಸಚಿವರಿಗೆ ನನ್ನ ಅಭಿನಂದನೆಗಳು.

ಶ್ರೀ ಎಂ. ವೀರಪ್ಪ ಮೊಯಿಲಿ.—

ಸನ್ಮಾನ್ಯ ಅಧ್ಯಕ್ಷರೇ,

1. ನಾನು ಈಗ 1981-82 ರ ಆಯವ್ಯಯ ಅಂದಾಜುಗಳನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ.

2.1. ನಮ್ಮ ರಾಜ್ಯದ 102 ತಾಲೂಕುಗಳು ಕ್ಷಾಮ ಪರಿಸ್ಥಿತಿಯ ಬವಣೆಗೆ ತುತ್ತಾಗಿದ್ದು, ಆ ತಾಲೂಕುಗಳ ಜನತೆಯ ಸಂಕಷ್ಟ ನಿವಾರಣೆಗೆ ಕೈಕೊಂಡ ಪರಿಹಾರ ಕ್ರಮಗಳನ್ನು ಮುಂದುವರಿಸುವುದು ಮತ್ತು ತ್ವರಿತಗೊಳಿಸುವುದು ನಮ್ಮ ಸರ್ಕಾರಕ್ಕೆ ತೀವ್ರ ಕಳಕಳಿಯ ವಿಷಯವಾಗಿದೆ. ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿಯು ಪದೇ ಪದೇ ತಲೆದೋರುತ್ತಿರುವ ನಿಮಿತ್ತ ಆ ಬಗ್ಗೆ ತಕ್ಷಣ ಕ್ರಮಗಳಷ್ಟೇ ಅಲ್ಲದೆ ದೀರ್ಘಾವಧಿ ಕ್ರಮಗಳೂ ಅನಿವಾರ್ಯವೆಂಬುದು ರಾಜ್ಯ ಸರ್ಕಾರದ ಅಭಿಪ್ರಾಯವೆಂಬ ಅಂಶ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಹೀಗಾಗಿ 205 ಕೋಟಿ ರೂಪಾಯಿಗಳ ಅಲ್ಪಾವಧಿ ಮತ್ತು ದೀರ್ಘಾವಧಿ ನೆರವನ್ನು ಕೋರಿ ಭಾರತ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿದೆ ಹಾಗೂ ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದ ತಜ್ಞರ ತಂಡವು ಈ ಮನವಿಯಲ್ಲಿನ ಕೋರಿಕೆಗಳನ್ನು ಸಹಾನುಭೂತಿಪೂರ್ವಕವಾಗಿ ಮನಗಾಣುತ್ತಾರೆಂದೂ, ಇನ್ನು ಸ್ವಲ್ಪ ಸಮಯದಲ್ಲಿಯೇ ರಾಜ್ಯಕ್ಕೆ ಭೇಟಿ ನೀಡುತ್ತಾರೆಂದೂ ನಿರೀಕ್ಷಿಸುತ್ತೇವೆ.

2.2. ರಾಜ್ಯದ ರೈತ ಸಮುದಾಯದ ಬಹುಕಾಲದ ಬೇಡಿಕೆಗಳನ್ನು ಈಡೇರಿಸುವಲ್ಲಿ ಸರ್ಕಾರವು ಕೈಗೊಂಡ ದಿಟ್ಟ ಕ್ರಮವನ್ನು ಕುರಿತು ಮಾನ್ಯ ಸದಸ್ಯರ ಗಮನವನ್ನು ಸೆಳೆಯಬಯಸುತ್ತೇನೆ. ರೈತರ ಪ್ರತಿನಿಧಿಗಳ ಜೊತೆ ಚರ್ಚೆ ಮತ್ತು ಸಮಾಲೋಚನೆ ನಡೆಸಿ, ರೈತರ ಪ್ರಸಕ್ತ ಸಮಸ್ಯೆಗಳಿಗೆ ಸಾಧ್ಯವಾದಷ್ಟು ಹೆಚ್ಚು ಪರಿಹಾರ ಒದಗಿಸಲಾಗಿದೆ. ರೈತ ಸಮುದಾಯದ ಇತರ ಅನೇಕ ಬೇಡಿಕೆಗಳಿಗೆ ಪರಿಹಾರ ಒದಗಿಸಲು ಸರ್ಕಾರ ಕಾತರವಾಗಿದೆ. ಈ ಬೇಡಿಕೆಗಳನ್ನು ಪರಿಶೀಲಿಸುವಲ್ಲಿ ಮಾರ್ಗದರ್ಶಿ ಅಂಶವೆಂದರೆ, ಸರ್ಕಾರವು ರೈತರ ದೀರ್ಘಾವಧಿ ಹಿತಾಸಕ್ತಿಗಳಿಗೆ ಅನುಕೂಲವಾಗುವ ಕ್ರಮ ಕೈಗೊಳ್ಳಬೇಕು ; ರೈತ ಸಮುದಾಯಕ್ಕೆ, ಸದ್ಯ ತಾತ್ಕಾಲಿಕ ಪ್ರಯೋಜನಗಳನ್ನು ಒದಗಿಸುವ, ಪರಂತು ಕಾಲಾಂತರದಲ್ಲಿ ಗುರುತರ ಹಾನಿಯುಂಟುಮಾಡುವಂಥ ಕೆಲವು ಬೇಡಿಕೆಗಳನ್ನು ಈಡೇರಿಸುವ ಪ್ರಲೋಭನಕ್ಕೆ ಒಳಗಾಗಕೂಡದು.

3. ಉತ್ಪಾದನಾರಹಿತ ಸರ್ಕಾರೀ ವೆಚ್ಚದಲ್ಲಿ ಕಡಿತದ ಅಗತ್ಯತೆಯಿದೆಯೆಂದು ದೇಶಾದ್ಯಂತ ನಡೆಯುತ್ತಿರುವ ಚರ್ಚೆಯ ಕಡೆಗೆ ತಮ್ಮ ಗಮನ ಸೆಳೆಯಬಯಸುತ್ತೇನೆ. ಸರ್ಕಾರವು ವಹಿಸುವ ವೆಚ್ಚದಲ್ಲಿ ಕಟ್ಟುನಿಟ್ಟಾದ ಮಿತವ್ಯಯ ಸಾಧಿಸುವುದು ಹಾಗೂ ವೆಚ್ಚಕ್ಕೆ ಪ್ರತಿಫಲರೂಪದಲ್ಲಿ ಬರುವ ಉತ್ಪಾದನೆಯನ್ನು ಅಧಿಕಗೊಳಿಸುವುದು ಮಹತ್ವಪೂರ್ಣ ವಿಷಯವಾಗಿದೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರವು ಈಗಾಗಲೇ ಮಿತವ್ಯಯ ಆದೇಶಗಳನ್ನು ಹೊರಡಿಸಿದೆ ಮತ್ತು ಹೊಸ ಯೋಜನೆಗಳನ್ನು ಪರಿಶೀಲಿಸುವಾಗ, ಮಿತವ್ಯಯದ ಕ್ರಮಗಳನ್ನು ಅನ್ವಯಿಸುತ್ತದೆ. ಸರ್ಕಾರವು ಕೈಗೊಂಡ ಈ ಕ್ರಮಗಳಿಗೆ ಯಶ ದೊರೆತಿದೆಯೆಂದು

ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಯೋಜನೇತರ ವೆಚ್ಚವು ಏರುವುದನ್ನು ತಡೆಗಟ್ಟುವಲ್ಲಿ ಮತ್ತು ಯೋಜನಾ ವೆಚ್ಚವು ಅಧಿಕ ಅಭಿವೃದ್ಧಿಗೆ ಎಡೆಗೊಡುವಂತೆ ಮಾಡುವಲ್ಲಿ 1980–81ನೇ ವರ್ಷವು ಮಹತ್ವಪೂರ್ಣವಾಗಿದೆ. ಯೋಜನೇತರ ವೆಚ್ಚದಲ್ಲಿ ಶಿಕ್ಷಣ, ಸಾಮಾಜಿಕ ಭದ್ರತೆ, ಆರೋಗ್ಯ ಮುಂತಾದ ಸರ್ಕಾರಿ ಕಾರ್ಯ ಚಟುವಟಿಕೆಗಳ ಅನೇಕ ಪ್ರಮುಖ ವಲಯಗಳು ಒಳಗೊಂಡಿವೆ. ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಕೆಲವು ಮೂಲಭೂತ ಉದ್ದೇಶಗಳಿಗೆ ಬದ್ಧವಾಗಿದ್ದು, ಆ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯತ್ಯಾಸ ಮಾಡುವುದು ಸಾಧ್ಯವಿಲ್ಲ. ಆದ್ದರಿಂದ ಯೋಜನೇತರ ವೆಚ್ಚವನ್ನು ಮೊಟಕುಗೊಳಿಸುವಲ್ಲಿ ಕೆಲವು ಮಿತಿಗಳನ್ನು ಇರಿಸಿಕೊಳ್ಳುವುದು ಅನಿವಾರ್ಯ. ಅದೇ ರೀತಿ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವಲ್ಲಿ ಪೊಲೀಸು ಇಲಾಖೆಗೆ ಹೆಚ್ಚಿನ ವೆಚ್ಚ ಅತ್ಯವಶ್ಯ. ಜೀವನ ಮಟ್ಟವು ಏರಿರುವ ಕಾರಣ ಸರ್ಕಾರಿ ನೌಕರರಿಗೆ ಮತ್ತು ಇತರ ಸಹಾಯ ಪೋಷಿತ ಸಂಸ್ಥೆಗಳ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯೆ ಮಂಜೂರು ಮಾಡಬೇಕಾಯಿತು. ಮಿತವ್ಯಯ ಸಾಧಿಸುವಲ್ಲಿ ಇಂತಹ ನಿರ್ಬಂಧಗಳನ್ನು ಎದುರಿಸಬೇಕಾಗಿ ಬಂದರೂ, ಕಳೆದ ವರ್ಷದ ಬಜೆಟ್‌ನಲ್ಲಿ ಸೂಚಿಸಲಾದ 116·12 ಕೋಟಿ ರೂಪಾಯಿ ಒಟ್ಟು ಕೊರತೆಯನ್ನು 1980–81ರ ಸಾಲಿನ ಪರಿಷ್ಕೃತ ಅಂದಾಜುಗಳ ಮೇರೆಗೆ 50·24 ಕೋಟಿ ರೂಪಾಯಿಗಳಷ್ಟಕ್ಕೆ ಇಳಿಸುವುದು ಸಾಧ್ಯವಾಗಿದೆ.

4.1. ಈ ವರ್ಷ, ಸರ್ಕಾರವು 20 ಅಂಶಗಳ ಆರ್ಥಿಕ ಕಾರ್ಯಕ್ರಮದ ಅನುಷ್ಠಾನಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಿದೆ. ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವಂತೆ ನೋಡಿಕೊಳ್ಳಲು ತಾಲೂಕು ಮತ್ತು ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ಹಾಗೆಯೇ ಈ ಕಾರ್ಯಕ್ರಮವನ್ನು, ಜಿಲ್ಲಾ ವಲಯ ಯೋಜನಾ ಕಾರ್ಯಕ್ರಮಗಳನ್ನು ಮತ್ತು ಗ್ರಾಮೀಣ ಅಭಿವೃದ್ಧಿ ವಿಶೇಷ ಯೋಜನೆಗಳನ್ನು ಸೂಕ್ತವಾಗಿ ಪರಿಶೀಲಿಸುವಂತೆ ಮತ್ತು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವಂತೆ ನೋಡಿಕೊಳ್ಳಲು ರಾಜ್ಯ ಮಟ್ಟದ ಸಮಿತಿಯೊಂದನ್ನು ಸಹ ರಚಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅನುಷ್ಠಾನದ ಮೂಲಕ ಗರಿಷ್ಠ ಪ್ರತಿಫಲ ದೊರಕಿಸುವ ಉದ್ದೇಶದಿಂದ, ಸಂಬಂಧಪಟ್ಟ ಎಲ್ಲ ಕಾರ್ಯ ಸಂಸ್ಥೆಗಳ ಪ್ರಯತ್ನಗಳನ್ನು ಸಮನ್ವಯಗೊಳಿಸುವ ಹೊಣೆಗಾರಿಕೆಯನ್ನು ಸಚಿವರೊಬ್ಬರಿಗೆ ವಹಿಸಿಕೊಡಲಾಗಿದೆ. ಅಭಿವೃದ್ಧಿಯ ಈ ವಲಯದಲ್ಲಿ ಸಾಧಿಸಲಾಗುತ್ತಿರುವ ತ್ವರಿತ ಪ್ರಗತಿಯಿಂದಾಗಿ ಗ್ರಾಮಾಂತರ ಜನಜೀವನದ ಗುಣಮಟ್ಟವು ಉತ್ತಮಗೊಳ್ಳುವುದನ್ನು ನಮ್ಮ ಸರ್ಕಾರವು ಇದಿರು ನೋಡುತ್ತಿದೆ.

4.2. ಸಾಮಾಜಿಕ ನ್ಯಾಯದಿಂದ ಕೂಡಿದ ಆರ್ಥಿಕ ಪ್ರಗತಿಯನ್ನು ಸಾಧಿಸುವ ಯತ್ನದಲ್ಲಿ, ಶೀಘ್ರ ಅಭಿವೃದ್ಧಿಯಾಗಬೇಕೆಂಬ ನಮ್ಮ ಧ್ಯೇಯ ಸಾಧನೆಗೆ ಕಾಲಕಾಲಕ್ಕೆ ಅಡ್ಡಿ ಆತಂಕಗಳನ್ನೊಡ್ಡುತ್ತಿರುವ ಕೆಲವು ಪಟ್ಟಭದ್ರ ಹಿತಾಸಕ್ತಿಗಳನ್ನು ಇದಿರಿಸುವಲ್ಲಿ, ನಮ್ಮ ಸರ್ಕಾರವು ಕ್ರಿಯಾಶೀಲ ಉತ್ಸಾಹವನ್ನೂ, ಸ್ಥೈರ್ಯವನ್ನೂ ತೋರಿಸಿದೆ. ಹಲವಾರು ಜಿಲ್ಲೆಗಳಲ್ಲಿ ಲಕ್ಷಾಂತರ ಜನರು ಅಭಾವ ಪರಿಸ್ಥಿತಿಗೆ ಗುರಿಯಾಗಿರುವ

ಸಂದರ್ಭದಲ್ಲಿ ರಾಜ ದ ಹಲವಾರು ಪ್ರದೇಶಗಳಲ್ಲಿ ಅನಧಿಕೃತ ಆಹಾರಧಾನ್ಯಗಳ ಮತ್ತು ಅತ್ಯಾವಶ್ಯಕ ಸರಕುಗಳ ಅಕ್ರಮ ದಾಸ್ತಾನುಗಳನ್ನು ಬಯಲಿಗೆ ತರಲು ಕ್ರಮ ಕೈಗೊಳ್ಳಲಾಗಿದೆ. ಈ ಕಾರ್ಯಾಚರಣೆಯ ಪರಿಣಾಮವಾಗಿ 2.43 ಕೋಟಿ ರೂಪಾಯಿ ಮೌಲ್ಯದ ಘೋಷಿಸಿಲ್ಲದ ಆಹಾರಧಾನ್ಯಗಳ ಮತ್ತು ವಿವಿಧ ನಿಯಂತ್ರಿತ ಸರಕುಗಳ ಅಕ್ರಮ ದಾಸ್ತಾನು ಬಯಲಿಗೆ ಬಂದಿದೆ.

4.3. ವಿಶೇಷ ರಿಯಾಯಿತಿ ವರ್ಗದ ವಿದ್ಯುತ್ ಬಳಕೆದಾರರಿಗೆ ಈ ವರೆಗೆ ಲಭ್ಯವಿದ್ದ ವ್ಯತ್ಯಾಸ ತೆರಿಗೆ ದರಗಳನ್ನು ನಿಲ್ಲಿಸಲಾಗಿದೆ ಮತ್ತು ವಿಧಾನ ಮಂಡಲದ ಉಭಯ ಸದನಗಳೂ 1981ನೇ ವಿದ್ಯುಚ್ಛಕ್ತಿ (ಸರಬರಾಜು) (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅನುಮೋದಿಸಿವೆ. ಮೇಲೆ ಹೇಳಿದ ತಿದ್ದುಪಡಿಗೆ ಮುಂದಿನ ಕ್ರಮವಾಗಿ 1981ನೇ ಫೆಬ್ರುವರಿ 1ನೇ ದಿನಾಂಕದಂದು ಮತ್ತು ಆ ತರುವಾಯ ಮೀಟರ್ ಓದುವ ಮೊದಲ ದಿನದಿಂದ ಜಾರಿಗೆ ಬರುವಂತೆ ವಿದ್ಯುತ್ ತೆರಿಗೆಗಳನ್ನು ಪರಿಷ್ಕರಿಸಲಾಗಿದೆ. ತೆರಿಗೆಗಳ ಪರಿಷ್ಕರಣದಿಂದ ಈ ಹಿಂದೆ ಮಾಡಿಕೊಂಡ ಎಲ್ಲ ವಿಶೇಷ ಒಪ್ಪಂದಗಳನ್ನು ಮುಕ್ತಾಯಗೊಳಿಸಿದಂತಾಗಿದೆ. ಇದರಿಂದಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಅಧಿಕ ಪ್ರಮಾಣದಲ್ಲಿ ಆದಾಯವನ್ನು ದೊರಕಿಸಿ ಕೊಡಲು ಮತ್ತು ಯೋಜನಾ ಕಾರ್ಯಕ್ರಮಗಳ ಅನುಷ್ಠಾನವನ್ನು ತ್ವರಿತಗೊಳಿಸಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗುತ್ತದೆ.

4.4. 1980ರ ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮವನ್ನು ತೀರ್ಣಗೊಳಿಸಲಾಗಿದೆ. ಮುಖ್ಯವಾಗಿ ಅತ್ಯಂತ ಕಡಿಮೆ ದರಗಳಲ್ಲಿ ಅರಣ್ಯೋತ್ಪನ್ನಗಳ ಪೂರೈಕೆಗೆ ಈ ಹಿಂದೆ ಮಾಡಿಕೊಂಡ ಒಪ್ಪಂದ ಮತ್ತು ಗುತ್ತಿಗೆಗಳನ್ನು ರದ್ದುಗೊಳಿಸಲಾಗಿದೆ ಮತ್ತು ಸದ್ಯ ಅರಣ್ಯೋತ್ಪನ್ನ ಪೂರೈಕೆಯಷ್ಟೇ ಅಲ್ಲದೆ ಅರಣ್ಯಗಳ ದೀರ್ಘಾವಧಿ ಅಭಿವೃದ್ಧಿಗೆ ಅನುಕೂಲವಾಗುವಂತೆ ಸಾಕಷ್ಟು ಅಧಿಕ ಆದಾಯವನ್ನು ಗಳಿಸಲು ಮತ್ತು ನಮ್ಮ ಅಮೂಲ್ಯ ಅರಣ್ಯ ಸಂಪನ್ಮೂಲಗಳು ನಶಿಸಿ ಹೋಗುವುದನ್ನು ನಿವಾರಿಸಲು ಹೊಸ ಸ್ವಾಮ್ಯಶುಲ್ಕ ದರಗಳನ್ನು ನಿಗದಿಪಡಿಸಲಾಗಿದೆ.

4.5. ಕಡತ ವಿಲೇವಾರಿ ಕಾರ್ಯಕ್ರಮದೊಂದಿಗೆ ಆರಂಭಿಸಿದ ನಮ್ಮ ಆಡಳಿತ ಸುಧಾರಣಾ ಆಂದೋಲನಕ್ಕೆ ಮುಂದಿನ ಕ್ರಮವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಅನಿರೀಕ್ಷಿತ ಭೇಟಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ಸಾರ್ವಜನಿಕರಿಗೆ ಪ್ರಾಮಾಣಿಕ ಸೇವೆ ಸಲ್ಲಿಸಿ ನಮ್ಮ ರಾಜ್ಯವು ತ್ವರಿತ ಪ್ರಗತಿ ಸಾಧಿಸುವಲ್ಲಿ ಸಹಕಾರ ನೀಡಬೇಕು ಹಾಗೂ ಅನುಕೂಲರಹಿತ ಮತ್ತು ದುರ್ಬಲ ವರ್ಗದವರಿಗೆ ಆರ್ಥಿಕ ನ್ಯಾಯ ದೊರೆಯುವಂತೆ ನೋಡಿಕೊಳಬೇಕೆಂಬ ಕರ್ತವ್ಯ ಪ್ರಜ್ಞೆಯನ್ನು ಸರ್ಕಾರಿ ನೌಕರರಲ್ಲಿ ಜಾಗೃತಗೊಳಿಸುವುದೇ ಈ ಕ್ರಮಗಳ ಉದ್ದೇಶ.

4.6. ಅಂತರ ರಾಜ್ಯಮಟ್ಟದಲ್ಲಿ ಕಾವೇರಿ ಜಲಾನಯನ ಪ್ರದೇಶದ ನೀರಿನ ನ್ಯಾಯಬದ್ಧ ಪಾಲು ಪಡೆಯುವಲ್ಲಿ ನಮ್ಮ ರಾಜ್ಯದ ಹಕ್ಕುಗಳ ವಿಚಾರದಲ್ಲಿ ಹೊಸ ನಿಲುವು ತಳೆಯಲಾಗಿದೆ. ಇದರಿಂದಾಗಿ, ಇನ್ನು ಮುಂದೆ ಖಚಿತ ನೀರು ಪೂರೈಕೆಯ ವಿಚಾರದಲ್ಲಿ ಲಕ್ಷಾಂತರ ರೈತರ ಹಕ್ಕುಗಳನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಹೀಗೆ, ಒತ್ತಡ ಹೇರುವ ವರ್ಗಗಳಿಗೆ ಅಥವಾ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣಿಯದೆ,

ಜನತೆಗೆ ಸಮರ್ಥ ಸೇವೆ ಸಲ್ಲಿಸುವ ತನ್ನ ಧೃಢ ಕಾರ್ಯನೀತಿಯನ್ನು ಸರ್ಕಾರವು ಹಲಕೆಲವು ರೀತಿಗಳಲ್ಲಿ ವ್ಯಕ್ತಗೊಳಿಸಿದೆ.

5. ರಾಷ್ಟ್ರೀಯ ಮಟ್ಟದಲ್ಲಿ, ಆರ್ಥಿಕ ಮಹತ್ವದ ಪ್ರಮುಖ ಯೋಜನೆಗಳ ಹಂಚಿಕೆಯಲ್ಲಿ ರಾಜ್ಯಕ್ಕೆ ಸಮಾನ ಪಾಲಿನ ಅಗತ್ಯತೆಯ ಬಗ್ಗೆ ನಮ್ಮ ಸರ್ಕಾರವು ನಿರಂತರವಾಗಿ ಒತ್ತಾಯಿಸುತ್ತಿದೆ. ವಿಜಯನಗರ ಉಕ್ಕುಸ್ಥಾವರ ಸ್ಥಾಪನೆಯ ವಿಚಾರದಲ್ಲಿ ನಮ್ಮ ಸರ್ಕಾರವು ತನ್ನ ಪ್ರಯತ್ನಗಳನ್ನು ದ್ವಿಗುಣಗೊಳಿಸಿದೆ. ಹೀಗಾಗಿ ಈ ಉಕ್ಕು ಕಾರ್ಖಾನೆಗೆ ಸಂಬಂಧಿಸಿದ ಅನಿಶ್ಚಿತತೆಯ ದಶಕವು ಕೊನೆಗೊಮ್ಮೆ ಮುಕ್ತಾಯಗೊಳ್ಳಬಹುದು. ಕರಾವಳಿ ಪ್ರದೇಶದಲ್ಲಿ ಉಕ್ಕು ಸ್ಥಾವರವನ್ನು ಸ್ಥಾಪಿಸುವ ಸಂಬಂಧದಲ್ಲಿ ಕೇಂದ್ರ ಸರ್ಕಾರಕ್ಕೆ ವಿಶೇಷ ಕೋರಿಕೆಯನ್ನು ಸಲ್ಲಿಸಲಾಗಿದೆ. ಕರಾವಳಿ ಪ್ರದೇಶದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಅಗತ್ಯತೆಯನ್ನು ಪೂರೈಸಲು ಮಂಗಳೂರಿನ ಸಮೀಪ ತೈಲಶೋಧನಾಗಾರವು ಅತಿ ಶೀಘ್ರವಾಗಿ ಸ್ಥಾಪನೆಯಾಗಬೇಕೆಂದು ಕೇಳಿಕೊಳ್ಳಲಾಗಿತ್ತು. ಇದಕ್ಕೆ ಪೂರಕವಾಗಿ ಮಂಗಳೂರಿನಲ್ಲಿ ಪೆಟ್ರೋ-ಕೆಮಿಕಲ್ ಕಾಂಪ್ಲೆಕ್ಸ್ ಒಂದನ್ನು ಸ್ಥಾಪಿಸುವ ಸಲುವಾಗಿ ನಾವು ಸಲ್ಲಿಸಿದ ವಿನಂತಿಯು ಕೇಂದ್ರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಹಾಗೆಯೇ ಇಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಜಂಟಿ ಸರ್ಕಾರಿ ವಲಯಗಳಾದ ಭಾರತ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್ ಹಾಗೂ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿಮಿಟೆಡ್—ಇವುಗಳ ಹೊರತಾಗಿ ಸಣ್ಣ ಅಥವಾ ಮಧ್ಯಮ ಪ್ರಮಾಣದ ಇಲೆಕ್ಟ್ರಾನಿಕ್ ಉದ್ಯಮಗಳಲ್ಲಿ ಹೇಳಿಕೊಳ್ಳುವಂಥ ಅಥವಾ ಭಾರಿ ಪ್ರಮಾಣದ ಹಣ ಹೂಡಿಕೆಯಾಗಿಲ್ಲ. ಇಲೆಕ್ಟ್ರಾನಿಕ್ಸ್ ಉದ್ಯಮಕ್ಕೆ ಅತ್ಯಗತ್ಯವಾದ ಸೌಲಭ್ಯಗಳನ್ನೊದಗಿಸುವ ಸಲುವಾಗಿ ರಾಜ್ಯ ಸರ್ಕಾರದ ಒಡೆತನಕ್ಕೆ ಸೇರಿದ ಕರ್ನಾಟಕ ರಾಜ್ಯ ಇಲೆಕ್ಟ್ರಾನಿಕ್ಸ್ ಅಭಿವೃದ್ಧಿ ಕಾರ್ಪೊರೇಷನ್ ಸಂಸ್ಥೆಯು, ಬೆಂಗಳೂರು ನಗರದ ಹೊರ ಪ್ರದೇಶದಲ್ಲಿ ಇಲೆಕ್ಟ್ರಾನಿಕ್ ನಗರವೊಂದನ್ನು ನಿರ್ಮಿಸುತ್ತಿದೆ. ಇದರಿಂದಾಗಿ, ಸಣ್ಣ ಮತ್ತು ಮಧ್ಯಮ ಪ್ರಮಾಣದ ವಲಯದ ಇಲೆಕ್ಟ್ರಾನಿಕ್ ಉದ್ಯಮದ ಅಭಿವೃದ್ಧಿಯು ಬಲಗೊಳ್ಳುತ್ತದೆ. ಬೆಂಗಳೂರಿನಲ್ಲಿ ದೂರದರ್ಶನ ಕೇಂದ್ರದ ಸ್ಥಾಪನೆಯಾಗಬೇಕು ಮತ್ತು 1983ನೇ ಸಾಲಿನಿಂದ ಅದರ ಕಾರ್ಯಾರಂಭವಾಗಬೇಕೆಂಬ ವಿಚಾರದಲ್ಲಿ ನಾವು ಕೈಗೊಂಡ ಪ್ರಯತ್ನಗಳು ಸಫಲವಾಗಿವೆ. ಈ ಎಲ್ಲ ಕಾರ್ಯ ಯೋಜನೆಗಳ ನಿಮಿತ್ತ ಯೋಜನೆಯ ಕೇಂದ್ರ ವಲಯಕ್ಕೆ ಈ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸಾಕಷ್ಟು ಪ್ರಮಾಣದ ಹಣವಿನಿಯೋಗವಾಗುವುದು ಖಂಡಿತ.

6. ಪ್ರಸಕ್ತ ವರ್ಷ 392·55 ಕೋಟಿ ರೂಪಾಯಿ ವೆಚ್ಚಕ್ಕೆ ಪ್ರಸ್ತಾವಿಸಲಾಗಿದ್ದರೂ, ನಿರೀಕ್ಷಿತ ಸಂಪನ್ಮೂಲಗಳು ತೀವ್ರ ಕ್ಷಾಮದ ಕಾರಣದಿಂದಾಗಿ ಕಡಿಮೆಯಾದುದರಿಂದ ಪ್ರಸ್ತಾವಿತ ಯೋಜನಾ ವೆಚ್ಚವನ್ನು 392·55 ಕೋಟಿ ರೂಪಾಯಿಯಿಂದ 367·30 ಕೋಟಿ ರೂಪಾಯಿಗೆ ಮೊಟಕುಗೊಳಿಸುವುದು ಅನಿವಾರ್ಯವಾಯಿತು. ಆದರೆ ಇದರಲ್ಲಿ ಮುಂದುವರಿಯುತ್ತಿರುವ ಕಾವೇರಿ ಜಲಾನಯನ ನೀರಾವರಿ ಯೋಜನೆಗಳಿಗೆ ತೊಡಗಿಸಿದ 25·50 ಕೋಟಿ ರೂಪಾಯಿ ಸೇರಿಲ್ಲ. ಪರಿಷ್ಕೃತ ಒಟ್ಟು ಯೋಜನಾ ವೆಚ್ಚದ 392·80 ಕೋಟಿ ರೂಪಾಯಿಗಳ ವಿವರಗಳು ಈ ಮುಂದಿನಂತಿವೆ :

ವಲಯಗಳು		ಹಿಂದೆ ಪ್ರಸ್ತಾವಿಸಿದ ವೆಚ್ಚ	1980-81 ರ ಸಾಲಿನ ಪರಿಷ್ಕೃತ ವೆಚ್ಚ
		(ರೂ.	ಕೋಟಿಗಳಲ್ಲಿ)
ಕೃಷಿ ಮತ್ತು ಸಂಬಂಧಪಟ್ಟ ಸೇವೆಗಳು		65.17	57.93
ಸಹಕಾರ		8.72	8.72
ನೀರಾವರಿ ಮತ್ತು ವಿದ್ಯುಚ್ಛಕ್ತಿ ಅಭಿವೃದ್ಧಿ :			
(ಎ) ನೀರಾವರಿ ಕಾವೇರಿ ಜಲಾನಯನ ನೀರಾವರಿ ಯೋಜನೆಗಳನ್ನು ಹೊರತು ಪಡಿಸಿ	73.75		
(ಬಿ) ವಿದ್ಯುಚ್ಛಕ್ತಿ	99.50		
		173.25	173.25
ಉದ್ಯಮಗಳು ಮತ್ತು ಖನಿಜಗಳು		31.22	31.22
ಸಾರಿಗೆ ಮತ್ತು ಸಂಪರ್ಕ		25.53	21.53
ಸಾಮಾಜಿಕ ಮತ್ತು ಸಾಮುದಾಯಿಕ ಸೇವೆಗಳು		85.47	72.86
ಆರ್ಥಿಕ ಮತ್ತು ಸಾಮಾನ್ಯ ಸೇವೆಗಳು		3.19	1,79
ಯೋಜನಾ ಕಾರ್ಯಕ್ರಮಗಳ ಬಗ್ಗೆ ಒಟ್ಟು ವೆಚ್ಚ		392.55	367.30
ಯೋಜನೇತರ ಕಾವೇರಿ ಜಲಾನಯನ ನೀರಾವರಿ ಯೋಜನೆಗಳ ಬಗ್ಗೆ ವೆಚ್ಚ		25.50	25.50
ಒಟ್ಟು ಅಭಿವೃದ್ಧಿ ಯೋಜನಾ ವೆಚ್ಚ		418.05	392.80

7. ಯೋಜನೆಯ ಗಾತ್ರವನ್ನು ಮೊಟಕುಗೊಳಿಸುವಾಗ, ಪ್ರಮುಖ ವಲಯಗಳಿಗೆ ಒದಗಿಸಿದ ವೆಚ್ಚದಲ್ಲಿ ಯಾವ ವ್ಯತ್ಯಾಸವೂ ಆಗದಂತೆ ನೋಡಿಕೊಳ್ಳಲಾಗಿದೆ. ಕ್ಷಾಮ ಪರಿಸ್ಥಿತಿಯ ನಿಮಿತ್ತ ಭಾರತ ಸರ್ಕಾರವು ಮುಂಗಡ ಯೋಜನಾ ನೆರವನ್ನು ಮಂಜೂರು ಮಾಡಿದೆ. ಇದರಿಂದಾಗಿ ಕುಡಿಯುವ ನೀರು ಸೌಲಭ್ಯ, ಗ್ರಾಮಾಂತರ ರಸ್ತೆ, ಜಲ ಮತ್ತು ಭೂಸಾರ ಸಂರಕ್ಷಣೆ ಮತ್ತು ಸಣ್ಣ ನೀರಾವರಿ ಸೌಕರ್ಯಗಳಿಗೆ ವಾಸ್ತವ ವ್ಯವಸ್ಥೆ ಮಾಡಲಾಗಿದೆ. ಹಾಗೆಯೇ ಕ್ಷಾಮ ಪರಿಸ್ಥಿತಿಯಿಂದ ಉದ್ಭವಿಸಿದ ನಿರುದ್ಯೋಗವನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಲು ಪ್ರಯತ್ನ ನಡೆಸಲಾಗಿದೆ.

8. ಇತ್ತೀಚೆಗೆ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು 1980-85 ನೇ ಸಾಲಿನ ಆರನೆಯ ಪಂಚವಾರ್ಷಿಕ ಯೋಜನೆಗೆ ಒಪ್ಪಿಗೆ ನೀಡಿದೆ. ರಾಜ್ಯಕ್ಕೆ 1980-85 ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ವಹಿಸಬೇಕಾದ ವೆಚ್ಚವನ್ನು 2,400 ಕೋಟಿ ರೂಪಾಯಿಗಳೆಂದು ನಿಗದಿಪಡಿಸಲಾಗಿದ್ದು, 1980 ನೇ ಡಿಸೆಂಬರ್ ಅವಧಿಯಲ್ಲಿ 1981-82 ರ ಸಾಲಿನ ವಾರ್ಷಿಕ ಯೋಜನಾ ವೆಚ್ಚವನ್ನು 444.50 ಕೋಟಿ ರೂಪಾಯಿಗೆ ನಿಗದಿಗೊಳಿಸಲಾಗಿದೆ.

ಆರನೆಯ ಯೋಜನೆಯ ಮುಖ್ಯ ಧ್ಯೇಯಗಳು ಈ ಕೆಳಗಿನಂತಿವೆ :

(1) ಶೇಕಡಾ 6.5 ಅಭಿವೃದ್ಧಿ ಪ್ರಮಾಣವನ್ನು ಸಾಧಿಸುವುದು.

(2) 1979-80ರಲ್ಲಿದ್ದ 1,185 ರೂಪಾಯಿಗಳ ತಲಾ ವರಮಾನವನ್ನು 1980-85 ರ ಹೊತ್ತಿಗೆ 1,500ರೂಪಾಯಿಗಳಿಗೆ ಏರಿಸುವುದು.

(3) ವರಮಾನ ವಿತರಣೆಯಲ್ಲಿರುವ ಅಸಮತೆಗಳನ್ನು ಕಡಿಮೆಮಾಡುವುದು.

(4) ದಾರಿದ್ರ್ಯ ರೇಖೆಗಿಂತ ಕೆಳಮಟ್ಟದಲ್ಲಿ ಜೀವಿಸುತ್ತಿರುವ ಜನತೆಯ ಜೀವನ ಮಟ್ಟವನ್ನು ಸುಧಾರಿಸುವುದು.

ಈ ಧ್ಯೇಯಗಳನ್ನು ಸಾಧಿಸುವುದಷ್ಟೇ ಅಲ್ಲದೆ, 1981-82 ರ ಸಾಲಿನ ರಾಜ್ಯದ ವಾರ್ಷಿಕ ಯೋಜನೆಯು ಈ ಮುಂದಿನ ಧ್ಯೇಯಗಳನ್ನು ಸಾಧಿಸಲಿದೆ, ಎಂದರೆ :

(i) ಈಗ ನೀರಾವರಿಗೊಳಗಾಗಿರುವ ಪ್ರದೇಶಕ್ಕೆ ಒಂದು ಲಕ್ಷ ಹೆಕ್ಟೇರಿನಷ್ಟು ಪ್ರದೇಶವನ್ನು ಸೇರಿಸುವುದು ;

(ii) ಆಹಾರ ಉತ್ಪಾದನೆಯನ್ನು 75 ಲಕ್ಷ ಟನ್ನುಗಳಿಗೆ ಏರಿಸುವುದು ;

(iii) ವಿದ್ಯುತ್ ಯೋಜನೆಗಳನ್ನು ತ್ವರಿತವಾಗಿ ಕಾರ್ಯಗತಗೊಳಿಸುವುದು ;

(iv) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಮತ್ತು ಇತರ ಬಡ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ;

ಆರನೆಯ ಪಂಚವಾರ್ಷಿಕ ಯೋಜನೆಗೆ ಹಾಗೂ ಬರಲಿರುವ 81-82 ರ ವಾರ್ಷಿಕ ಯೋಜನೆಗೆ ಒದಗಿಸಿದ ವೆಚ್ಚದ ವಿವರಗಳು ಈ ಮುಂದಿನಂತಿವೆ :

	ವಲಯಗಳು	ಆರನೇ ಯೋಜನೆ 1980-85	ವಾರ್ಷಿಕ ಯೋಜನೆ 1981-82 ರೂಪಾಯಿ ಕೋಟಿಗಳಲ್ಲಿ
1.	ಕೃಷಿ ಮತ್ತು ಸಂಬಂಧಪಟ್ಟ ಸೇವೆಗಳು	329.11	65.51
2.	ಸಹಕಾರ	50.00	8.72
3.	ಜಲ ಮತ್ತು ವಿದ್ಯುಚ್ಛಕ್ತಿ ಅಭಿವೃದ್ಧಿ	1,043.70	191.61
4.	ಉದ್ಯಮ ಮತ್ತು ಖನಿಜಗಳು	162.68	38.49
5.	ಸಾರಿಗೆ ಮತ್ತು ಸಂಪರ್ಕ	145.21	26.51
6.	ಸಾಮಾಜಿಕ ಮತ್ತು ಸಮುದಾಯ ಸೇವೆಗಳು	530.80	87.63
7.	ಆರ್ಥಿಕ ಸೇವೆಗಳು	2.50	0.43
8.	ಸಾಮಾನ್ಯ ಸೇವೆಗಳು	1.00	0.10
	ಒಟ್ಟು ರಾಜ್ಯಯೋಜನೆ	2,265.00	419.00
	ಅನುಮೋದನೆಯಾಗಬೇಕಾದ ನೀರಾವರಿ ಯೋಜನೆಗಳು	135.00	25.50
	ಕೆಲವು ವಲಯಗಳಿಗೆ ಪರಿಷ್ಕೃತ ಆದ್ಯತೆ ನೀಡಿದ ನಿಮಿತ್ತ ಯೋಜನಾ ವೆಚ್ಚದಲ್ಲಿ ಸೀಮಾಂತ ನಿವ್ವಳ ಹೆಚ್ಚಳ		4.88
	ಒಟ್ಟು ಅಭಿವೃದ್ಧಿ ವೆಚ್ಚ	2,400.00	449.38

9. ಹಿಂದಿನ ವರ್ಷ ನಾವು ಅನುಸರಿಸಬೇಕೆಂದುಕೊಂಡ ಸ್ಥೂಲ ಧ್ಯೇಯಗಳನ್ನು ಈ ವರ್ಷ ಬಜೆಟ್ಟನ್ನು ಮಂಡಿಸುವಾಗ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಮುಖ್ಯವಾಗಿ, ನಮ್ಮ ಸರ್ಕಾರವು 1981-82 ನೇ ವರ್ಷವನ್ನು ಆರ್ಥಿಕ ಶಿಸ್ತು ವರ್ಷವೆಂದು ಪರಿಗಣಿಸಬಯಸಿದೆ. ಅದಕ್ಕೆ ಆದ್ಯ ಗಮನ ನೀಡಿ, ಇನ್ನು ಮುಂದೆಯೂ ಮುಂದುವರಿಸಿಕೊಂಡು ಹೋಗುತ್ತೇವೆ. ಸರ್ಕಾರಕ್ಕೆ ಲಭ್ಯವಿರುವ ಅಲ್ಪ ಸಂಪನ್ಮೂಲಗಳನ್ನು ಸಂಗ್ರಹಿಸಿ, ಹೆಚ್ಚು ವಿಳಂಬವಿಲ್ಲದೆ ಗರಿಷ್ಠ ಫಲಿತಾಂಶ ದೊರೆಯುವಂತೆ ಬಳಸಿಕೊಳ್ಳಲಾಗುವುದು. ಮಿತವ್ಯಯ ಸಾಧಿಸಬಹುದಾದ ಮತ್ತು ಅಪವ್ಯಯವನ್ನು ನಿವಾರಿಸಬಹುದಾದ ವಲಯಗಳನ್ನು ಗುರುತಿಸಲು ಯೋಜನೇತರ ವೆಚ್ಚವನ್ನು ಸೂಕ್ಷ್ಮವಾಗಿ ಪರಿಷ್ಕರಿಸಲಾಗುವುದು. ಪ್ರಾಮುಖ್ಯತೆ ಇರುವ ಮತ್ತು ಕ್ಷಿಪ್ರ ಫಲಿತಾಂಶ ನೀಡುವ ಕಾರ್ಯಕ್ರಮಗಳಿಗೆ ಸಾಕಷ್ಟು ನಿಧಿಗಳು ದೊರೆಯುವಂತೆ ಯೋಜನಾ ವೆಚ್ಚವನ್ನು ಸೂಕ್ತ ರೀತಿಯಲ್ಲಿ ನಿಯಂತ್ರಿಸಲಾಗುವುದು. ಹಣದ ಅಡಚಣೆಯಿದ್ದರೂ ಏಕಕಾಲಕ್ಕೆ ಹಲವಾರು ಯೋಜನೆಗಳನ್ನು ತೆಗೆದುಕೊಳ್ಳುವ ಅವ್ಯವಸ್ಥೆಯ ಹಳೆಯ ರೂಢಿಯನ್ನು ಕೈಬಿಡಲಾಗುವುದು. ಸರ್ಕಾರ ಈಗಾಗಲೇ ತೆಗೆದುಕೊಂಡಿರುವ ಕಾರ್ಯಕ್ರಮಗಳನ್ನು ಭದ್ರಗೊಳಿಸಿ ನೀಡಿರುವ ಭರವಸೆಗಳನ್ನು ಅನುಷ್ಠಾನಗೊಳಿಸಲು ಕಾರ್ಯೋನ್ಮುಖವಾಗುವುದು.

10. ವಿವಿಧ ವಲಯಗಳ ಸಂಬಂಧದಲ್ಲಿ ಮುಂಬರುವ ವರ್ಷದಲ್ಲಿ ಯೋಜಿಸಲಾದ ಚಟುವಟಿಕೆಗಳ ಕೆಲವು ಮುಖ್ಯ ಅಂಶಗಳನ್ನು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ.

11·1. ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಮತ್ತು ವರಮಾನವನ್ನು ಅಧಿಕಗೊಳಿಸಲು ರಾಜ್ಯದಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ನಮ್ಮ ಸರ್ಕಾರವು ಆದ್ಯತೆ ನೀಡುವುದನ್ನು ಮುಂದುವರಿಸಲಾಗುತ್ತದೆ. ನೀರಾವರಿ, ಪ್ರವಾಹ ನಿಯಂತ್ರಣ ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಿಸಿ 191·61 ಕೋಟಿ ರೂಪಾಯಿಗಳನ್ನು ವಿನಿಯೋಗಿಸಲಾಗುವುದು. ಇದಲ್ಲದೆ ಮುಂದುವರಿಯುತ್ತಿರುವ ಕಾವೇರಿ ಜಲಾನಯನ ನೀರಾವರಿ ಯೋಜನೆಗಳ ಸಲುವಾಗಿ 25.50 ಕೋಟಿ ರೂಪಾಯಿಗಳನ್ನು ಮೀಸಲಿರಿಸಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕು ಒದಗಿಸಿದ ನೆರವನ್ನು ಪೂರ್ಣವಾಗಿ ಬಳಸಿಕೊಳ್ಳುವಂತೆ ನೋಡಿಕೊಳ್ಳಲು ಪ್ರಸ್ತಾವಿತ ವೆಚ್ಚ 42 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣ ಪೂರೈಸಲು ಪ್ರಯತ್ನಿಸಲಾಗುವುದು.

11·2. ವಿದ್ಯುತ್ ವಲಯದ ಸಲುವಾಗಿ, 1980-81 ರಲ್ಲಿ ಒದಗಿಸಲಾದ 99·50 ಕೋಟಿ ರೂಪಾಯಿಗಳಿಗೆ ಹೋಲಿಸಲಾಗಿ, ಈಗ ಒಟ್ಟು 117.75 ಕೋಟಿ ರೂಪಾಯಿ ವೆಚ್ಚಕ್ಕೆ ಏರ್ಪಾಡು ಮಾಡಲಾಗಿದೆ. ಈ ಕಾರ್ಯಕ್ರಮದ ಮೇರೆಗೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ಯೋಜನೆಗಾಗಿ 42 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ನಿಧಿಗಳನ್ನು ಕೂಡಲೇ ಪಡೆಯಲು ಸಾಧನೋಪಾಯಗಳನ್ನು ಪರಿಶೀಲಿಸಲಾಗುತ್ತಿದೆ. ಕಾಳೀ ನದಿ ಯೋಜನೆಯ ಮೊದಲನೇ ಹಂತಕ್ಕಾಗಿ ಸಾಕಷ್ಟು ನಿಧಿಗಳನ್ನು ಒದಗಿಸಲಾಗಿದೆ. ಮೊದಲನೇ ಎರಡು ಜನರೇಟರುಗಳ ಕಾರ್ಯ ಆರಂಭವಾಗಿದೆ ಮತ್ತು 1981-82ರ ಅವಧಿಯಲ್ಲಿ ಮೂರನೇ ಮತ್ತು

ನಾಲ್ಕನೇ ಘಟಕಗಳ ಕಾರ್ಯಾರಂಭಕ್ಕೆ ಪ್ರಯತ್ನ ನಡೆದಿದೆ. ಕಾಳೀ ನದಿ ಯೋಜನೆಯ ಎರಡನೇ ಹಂತವನ್ನು ಕಾರ್ಯಗತಗೊಳಿಸುವುದಕ್ಕಾಗಿ ಭಾರತ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿ ವಿಶ್ವಬ್ಯಾಂಕು ಹಾಗೂ ಇತರ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ನೆರವು ಪಡೆಯಲು ಕ್ರಮ ಕೈಗೊಳ್ಳಲಾಗುವುದೆಂದು ಈ ಸಂದರ್ಭದಲ್ಲಿ ತಮಗೆ ತಿಳಿಸಬಯಸುತ್ತೇನೆ.

11.3. 1979-80 ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಸಂಪೂರ್ಣವಾಗಿ ಜಲವಿದ್ಯುತ್ ಮೂಲವನ್ನೇ ಅವಲಂಬಿಸಿದ್ದುದರಿಂದ ವಿದ್ಯುಚ್ಛಕ್ತಿಯ ತೀವ್ರ ಅಭಾವವುಂಟಾಯಿತು. 1980 ನೇ ಆಗಸ್ಟ್ ತಿಂಗಳಲ್ಲಿ ಲಿಂಗನಮಕ್ಕಿ ಜಲಾಶಯವು ಪೂರ್ಣ ತುಂಬಿದ್ದರೂ ಸಹ ಸಾಮಾನ್ಯವಾಗಿದ್ದ ಈ ಕೊರತೆಯು 1980-81 ರ ಅವಧಿಯಲ್ಲೂ ಮುಂದುವರಿಯಿತು. ರಾಯಚೂರಿನ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಮೊದಲನೆಯ ಹಂತದ ಕಾರ್ಯ 1983-84ರ ಅವಧಿಯಲ್ಲಿ ಪ್ರಾರಂಭವಾಗುತ್ತದೆ. ಆ ತರುವಾಯ ಜಲವಿದ್ಯುತ್ ಮೂಲದ ಮೇಲಿನ ನಮ್ಮ ಹೆಚ್ಚಿನ ಅವಲಂಬನೆ ಕಡಿಮೆಯಾಗುವುದು. ಆದಾಗ್ಯೂ ಕರ್ನಾಟಕದಲ್ಲಿ ಅಣುವಿದ್ಯುಚ್ಛಕ್ತಿ ಕೇಂದ್ರವನ್ನು ಬೇಗನೇ ಸ್ಥಾಪಿಸುವ ಬಗ್ಗೆ ಕೋರಿಕೆ ಸಲ್ಲಿಸುವುದು ಅಗತ್ಯವಾಗಿದೆ. ನಮ್ಮ ಸರ್ಕಾರವು, ಈ ವಿಷಯದಲ್ಲಿ ಭಾರತ ಸರ್ಕಾರದೊಂದಿಗೆ ಸಮಾಲೋಚಿಸಿ ಕರ್ನಾಟಕದಲ್ಲಿ ಬದಲಿ ವಿದ್ಯುತ್ ಉತ್ಪಾದನಾ ಮೂಲಗಳನ್ನು ಸ್ಥಾಪಿಸುವ ಬಗ್ಗೆ ತೀವ್ರ ಕ್ರಮ ಕೈಕೊಳ್ಳುವಂತೆ ಒತ್ತಾಯ ಮಾಡುವುದು. ಸದ್ಯ ವಿದ್ಯುಚ್ಛಕ್ತಿಯನ್ನು ಪಡೆಯಲು ಕೇರಳ ರಾಜ್ಯದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಹೀಗಿದ್ದರೂ 1983-84 ರ ವರೆಗೆ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯ ಪೂರೈಕೆಯ ಕೊರತೆ ಮುಂದುವರಿಯುತ್ತದೆ.

11.4. ಸಂಪನ್ಮೂಲಗಳ ಹಂಚಿಕೆಯಲ್ಲಿ ವಿದ್ಯುಚ್ಛಕ್ತಿಯ ನಂತರ ನೀರಾವರಿಗೆ ಹೆಚ್ಚಿನ ಆದ್ಯತೆ ದೊರೆಯುವುದು. ಮುಂಬರುವ ವರ್ಷದಲ್ಲಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕಾಗಿ 73.86 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಮೊತ್ತವು ಕೂಡ ಈಗ ಮುಂದುವರಿಯುತ್ತಿರುವ ಎಲ್ಲ ನೀರಾವರಿ ಯೋಜನಾ ಕಾಮಗಾರಿಗಳಿಗೆ ಸಾಕಾಗುವುದಿಲ್ಲ. ನಮ್ಮಲ್ಲಿ ಲಭ್ಯವಿರುವ ಸೀಮಿತ ಸಂಪನ್ಮೂಲಗಳನ್ನು ಎಲ್ಲ ಯೋಜನೆಗಳಿಗೂ ಅತ್ಯಲ್ಪ ಪ್ರಮಾಣದಲ್ಲಿ ಬಳಸಿಕೊಂಡರೆ ಅವುಗಳ ಕಾರ್ಯಗತಿಯಲ್ಲಿ ವಿಳಂಬವುಂಟಾಗುವ ಸಂಭವವಿರುವುದರಿಂದ, ಅವುಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ಅನುಕೂಲವಾಗುವಂತೆ ಪ್ರತಿಯೊಂದು ಜಿಲ್ಲೆಯಲ್ಲೂ ಸೀಮಿತ ಸಂಖ್ಯೆಯ ಯೋಜನೆಗಳನ್ನು ಮಾತ್ರ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

11.5. ನಮ್ಮ ಸರ್ಕಾರವು ಸಣ್ಣ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ, ವಿಶ್ವ ಬ್ಯಾಂಕಿನೊಂದಿಗೆ ವ್ಯವಹರಿಸುವಲ್ಲಿ ವಿಶೇಷ ಯಶಸ್ಸನ್ನು ಸಾಧಿಸಿದೆ. ಈ 65 ಕೋಟಿ ರೂಪಾಯಿಗಳ ಯೋಜನೆಗೆ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘದಿಂದ (ಐಡಿಎ) 45 ಕೋಟಿ ರೂಪಾಯಿ ನೆರವು ದೊರೆಯುವುದು. ಹೀಗೆ ದೊರೆತ ನೆರವನ್ನು ರಾಜ್ಯದಾದ್ಯಂತ ಇರುವ ಎಲ್ಲ ಯೋಜನೆಗಳಿಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ.

ಇದರಿಂದಾಗಿ 37,500 ಹೆಕ್ಟೇರುಗಳಿಗೆ ನಿರಂತರ ನೀರು ಸರಬರಾಜು ಆಗಿ ಅದರ ಪ್ರಯೋಜನ ಲಭಿಸುವುದು. 6 ಕೋಟಿ ರೂಪಾಯಿಗಳ ಮೂಲ ಹಂಚಿಕೆಯೊಂದಿಗೆ ಪ್ರಾರಂಭಿಸಿದ ಈ ಯೋಜನೆಯನ್ನು ವಿಳಂಬವಿಲ್ಲದೆ ಕಾರ್ಯಗತಗೊಳಿಸಲಾಗುವುದು.

11.6. ಅನಾವೃಷ್ಟಿಯಿಂದ ಉಂಟಾದ ಪರಿಸ್ಥಿತಿಗಳನ್ನು ಎದುರಿಸಲು ಈ ವರ್ಷ ಸಣ್ಣ ನೀರಾವರಿ ಯೋಜನೆಗಳ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲು ಮಂಜೂರಾತಿ ನೀಡಲಾಗಿತ್ತು. ಇದರ ಮೇರೆಗೆ ಸಾಗುವಳಿ ಮಾಡಿದ ಪ್ರತಿ ಹೆಕ್ಟೇರು ಜಮೀನಿನ ವೆಚ್ಚವು 4,500 ರೂಪಾಯಿಗಳಿಗೆ ಮೀರುವಂತಿಲ್ಲ. ಕ್ಷಾಮ ಪರಿಹಾರ ಕಾರ್ಯಕ್ರಮದ ಮೇರೆಗೆ ಪ್ರಾರಂಭಿಸಲಾದ ಕೆರೆ ದುರಸ್ತಿ ಕಾಮಗಾರಿಗಳನ್ನು ಮುಂದಿನ ಮೂರು ತಿಂಗಳುಗಳ ಅವಧಿಯಲ್ಲಿ ಹವಾಮಾನ ಪರಿಸ್ಥಿತಿಯಲ್ಲಿ ಆಶಾದಾಯಕವಾದ ರೀತಿಯಲ್ಲಿ ಸುಧಾರಣೆ ಕಂಡು ಬಂದರೂ ಶಾಶ್ವತ ಕ್ಷಾಮ ಪರಿಹಾರ ಕಾರ್ಯಕ್ರಮದ ಅಂಗವಾಗಿ ಅವುಗಳನ್ನು ಮುಂದುವರಿಸಿ ಪೂರ್ಣಗೊಳಿಸಲಾಗುವುದು.

12.1. ರಾಜ್ಯದ ಆರ್ಥಿಕ ಸ್ಥಿತಿಯು ಪ್ರಮುಖವಾಗಿ ಕೃಷಿಯನ್ನೇ ಅವಲಂಬಿಸಿದೆ. 1980–81ನೇ ಸಾಲಿನಲ್ಲಿ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಸೇವೆಗಳ ಪರಿಷ್ಕೃತ ಅಂದಾಜು ವೆಚ್ಚ 57·93 ಕೋಟಿ ರೂಪಾಯಿಗಳಾಗಿದ್ದು 1981-82 ನೇ ಸಾಲಿನ ಉದ್ದೇಶಿತ ವೆಚ್ಚವು 65.51 ಕೋಟಿ ರೂಪಾಯಿಗಳಾಗುವುದು. 1979-80ನೇ ಸಾಲಿನಲ್ಲಿ 64·90 ಲಕ್ಷ ಟನ್ನು ಆಹಾರಧಾನ್ಯ ಮತ್ತು 5.89 ಲಕ್ಷ ಟನ್ನು ಬೇಳೆ ಕಾಳುಗಳನ್ನು ಉತ್ಪಾದಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನಂತೆ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದಾಗಿ ಈಗ 53.40 ಲಕ್ಷ ಟನ್ ಆಹಾರ ಧಾನ್ಯ ಹಾಗೂ 5.90 ಲಕ್ಷ ಟನ್ ಬೇಳೆ ಕಾಳುಗಳು ಉತ್ಪಾದನೆಯಾಗುವ ನಿರೀಕ್ಷೆ ಇದೆ. ಮುಂದಿನ ವರ್ಷ ಆಯ್ಕೆ ಮಾಡಿದ ಜಿಲ್ಲೆಗಳಲ್ಲಿ ಖಚಿತವಾಗಿ ಬೆಳೆಯುವ ಕೆಲವೊಂದು ಬೆಳೆಗಳನ್ನು ಬೆಳೆಸಲು ವಿಶೇಷ ಗಮನ ನೀಡಲು ಉದ್ದೇಶಿಸಲಾಗಿದೆ.

12.2. ಗುಲ್ಬರ್ಗ :—ತೊಗರಿ ಬೇಳೆಯ ಉತ್ಪಾದನೆಯನ್ನು ಹೆಚ್ಚಿಸಲಾಗುವುದು. ನಷ್ಟವನ್ನು ಕಡಿಮೆ ಮಾಡಲು ಬೆಳೆ ಸಂರಕ್ಷಣೆ ಮತ್ತು ಸುಗ್ಗಿ ನಂತರ ಕೈಕೊಳ್ಳಬೇಕಾಗಿರುವ ಕಾರ್ಯಕ್ರಮಗಳನ್ನು ತೀವ್ರಗೊಳಿಸಲಾಗುವುದು.

12.3. ಉತ್ತರ ಕನ್ನಡ :—ಎರಡು ಬೆಳೆಗಳನ್ನು ಬೆಳೆಸುವ ಪದ್ಧತಿಯನ್ನು ಎಂದರೆ ಭತ್ತದ ಬೆಳೆಯ ಅನಂತರ ಕಡಲೆಕಾಯಿಯ ಬೆಳೆಗಳನ್ನು ಬೆಳೆಸುವ ಪದ್ಧತಿಯನ್ನು ಪ್ರಚಾರಕ್ಕೆ ತಂದು ಪ್ರತಿ ಹೆಕ್ಟೇರಿನ ಉತ್ಪಾದನಾ ಸಾಮರ್ಥ್ಯವನ್ನು ಹಾಗೂ ಒಟ್ಟು ಉತ್ಪಾದನೆಯನ್ನು ಹೆಚ್ಚಿಸಲಾಗುವುದು. ಭತ್ತದ ಬೆಳೆಗೆ ಸುಣ್ಣದ ಗೊಬ್ಬರ, ಕಡಲೆಕಾಯಿ ಬೆಳೆಗೆ ಜಿಪ್ಸಮ್ ಗೊಬ್ಬರ ಹಾಕುವ ಮೂಲಕ ಹಾಗೂ ಇತರ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪ್ರತಿ ಹೆಕ್ಟೇರಿನ ಇಳುವರಿಯನ್ನು ಹೆಚ್ಚಿಸಲಾಗುವುದು.

12.4. ರಾಯಚೂರು :—ಉತ್ತಮ ಗುಣಮಟ್ಟದ ಬೀಜವನ್ನು ಬಳಸುವುದು, ಸೂಕ್ತ ಸಮಯದಲ್ಲಿ ಬೀಜವನ್ನು ಬಿತ್ತುವುದು, ಸೂಕ್ತ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು ಮತ್ತು ಬೆಳೆ ಸಂರಕ್ಷಣಾ ತಂತ್ರಗಳನ್ನು ಅನುಸರಿಸುವುದು—ಇವೇ

ಮುಂತಾದ ವಿಧಾನಗಳ ಮೂಲಕ ನೀರಾವರಿ ಹತ್ತಿ ಬೆಳೆಯ ಉತ್ಪಾದನೆಯನ್ನು ಹೆಚ್ಚಿಸಲಾಗುವುದು.

12.5. ಬಳ್ಳಾರಿ :—ಸುಧಾರಿತ ತಳಿಗಳನ್ನು ಜನಪ್ರಿಯಗೊಳಿಸಿ ಮತ್ತು ಸುಲಭ ಬೆಳೆ ಸಂರಕ್ಷಣಾ ಕ್ರಮಗಳನ್ನು ಅನುಸರಿಸಿ ಇಳುವರಿ ನಷ್ಟವನ್ನು ಕಡಿಮೆ ಮಾಡಿ ಮುಖ್ಯ ಎಣ್ಣೆ ಬೀಜವಾದ ಹರಳಿನ ಉತ್ಪಾದನೆಯನ್ನು ಹೆಚ್ಚಿಸಲಾಗುವುದು.

12.6. ಚಿತ್ರದುರ್ಗ :— ಉತ್ತಮ ಗುಣಮಟ್ಟದ ಬೀಜಗಳನ್ನು ಬಳಸಿ, ಕನಿಷ್ಠ ಬೆಳೆ ಸಂರಕ್ಷಣಾ ಕ್ರಮಗಳೂ ಸೇರಿದಂತೆ ಉತ್ಪಾದನಾ ತಂತ್ರಗಳನ್ನು ಅನುಸರಿಸಿ, ಕಡಲೆಕಾಯಿ ಮತ್ತು ಇತರ ಜೊತೆ ಬೆಳೆಗಳನ್ನು ಬೆಳೆಸಿ, ಕಡಲೆಕಾಯಿ ಮತ್ತು ಬೇಳೆ ಕಾಳುಗಳ ಉತ್ಪಾದನಾ ಸಾಮರ್ಥ್ಯ ಮತ್ತು ಉತ್ಪಾದನೆಯನ್ನು ಹೆಚ್ಚಿಸಲಾಗುವುದು.

12.7. ಕೊಡಗು :— ಮೆಣಸು ಮತ್ತು ಏಲಕ್ಕಿ ಬೆಳೆಗಳ ಜೊತೆಗೆ ಕಿತ್ತಳೆ ಬೆಳೆಯನ್ನು ಅಭಿವೃದ್ಧಿಗೊಳಿಸಲಾಗುವುದು. ಅವು ತೋಟಗಾರಿಕೆ ಬೆಳೆಗಳಾಗಿರುವುದರಿಂದ ಅವುಗಳಿಗೆ ವಿಶೇಷ ವೆಚ್ಚ ತಗಲುವ ತಾಂತ್ರಿಕ ವಿಧಾನಗಳನ್ನು ಬಳಸಬಹುದು.

13. 1981–82ನೇ ಸಾಲಿನಲ್ಲಿ ಚಿಕ್ಕಮಗಳೂರು, ಬಿಜಾಪುರ, ಬೀದರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೃಷಿ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಇದರಿಂದಾಗಿ, ರಾಜ್ಯದ ಪ್ರತಿಯೊಂದು ಜಿಲ್ಲೆಗೆ ಕೊನೇಪಕ್ಷ ಒಂದು ಕೃಷಿ ಶಾಲೆಯನ್ನು ಒದಗಿಸಿದಂತಾಗುವುದು.

14.1. ರಾಜ್ಯದಲ್ಲಿ 44 ಮಾರುಕಟ್ಟೆಗಳ ಅಭಿವೃದ್ಧಿಗಾಗಿ ವಿಶ್ವಬ್ಯಾಂಕಿನ ನೆರವನ್ನು ಬಳಸಿಕೊಂಡು ಹೆಚ್ಚಿನ ಮಾರುಕಟ್ಟೆ ಸೌಲಭ್ಯಗಳನ್ನು ಪೂರೈಸುವ ವಿಷಯವನ್ನು ನನ್ನ ಕಳೆದ ಬಜೆಟ್ ಭಾಷಣದಲ್ಲಿ ತಿಳಿಸಿದ್ದೆ. ಇನ್ನು ಮುಂದೆ ರಾಯಚೂರು, ಧಾರವಾಡ, ಬೆಳಗಾಂ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹತ್ತಿ ಖರೀದಿಯಲ್ಲಿ ಭಾರತದ ಹತ್ತಿ ನಿಗಮವು ಹೆಚ್ಚಿನ ಮಟ್ಟದಲ್ಲಿ ಭಾಗವಹಿಸುವಂತೆ ಸರ್ಕಾರ ಕ್ರಮ ಕೈಕೊಳ್ಳುವುದು. ಇದಲ್ಲದೆ ರಾಯಚೂರು, ಬಿಜಾಪುರ ಮತ್ತು ಬಾಗಲಕೋಟೆಗಳಲ್ಲಿ ಸಹಕಾರಿ ನೂಲಿನ ಗಿರಣಿಗಳನ್ನು ಪುನಸ್ಸಜ್ಜೀಕರಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸಹಕಾರಿ ವಲಯದಲ್ಲಿ ಇನ್ನೂ ನಾಲ್ಕು ನೂಲಿನ ಗಿರಣಿಗಳನ್ನು ಪ್ರಾರಂಭಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ. ಹತ್ತಿ ಬೆಳೆಯುವ ರೈತರಿಗೆ ಸಹಾಯ ಮಾಡುವ ಯೋಜನೆಗಳ ಜೊತೆಗೆ, ಸಂಸ್ಕರಣಾ ಘಟಕವನ್ನು ಸ್ಥಾಪಿಸಿ "ಕ್ಯಾಂಪ್ಕೋ" (CAMPCO) ವನ್ನು ಬಲಪಡಿಸುವ ಮೂಲಕ, ಕೋಕೋಬೀನ್ಸ್‌ಗಳ ಬೆಲೆ ಕಡಿಮೆಯಾಗಿ ಕೃಷಿಕರಿಗೆ ನಷ್ಟ ಸಂಭವಿಸದಂತೆ ಅವರಿಗೆ ರಕ್ಷಣೆ ನೀಡಲು ಉದ್ದೇಶಿಸಲಾಗಿದೆ.

14.2. ಪ್ರಸಕ್ತ ವರ್ಷ ಬೆಲ್ಲದ ಬೆಲೆಯು ಏರಿರುವುದರಿಂದ ಕಬ್ಬು ಅರೆಯಲು ಸಾಕಷ್ಟು ಕಬ್ಬು ಸಕ್ಕರೆ ಕಾರ್ಖಾನೆಗಳಿಗೆ ದೊರೆಯುತ್ತಿಲ್ಲ. ಹೀಗಿದ್ದರೂ ಹರಳು ಸಕ್ಕರೆ ಉತ್ಪಾದನೆಯು ಕಡಿಮೆಯಾಗದಂತೆ ನೋಡಿಕೊಳ್ಳಲಾಗಿದೆ. ಈ ವರ್ಷ ಸಕ್ಕರೆ ಉತ್ಪಾದನೆಯು 3.5 ಲಕ್ಷ ಮೆಟ್ರಿಕ್ ಟನ್ನುಗಳಷ್ಟಾಗುವುದೆಂದು ನಿರೀಕ್ಷಿಸಲಾಗಿದೆ. 1979-80 ರಲ್ಲಿ ಉತ್ಪಾದನೆಯು 2.7 ಲಕ್ಷ ಟನ್ನುಗಳಷ್ಟಿತ್ತು. ಲೈಸೆನ್ಸು ಪಡೆದ ಸಹಕಾರೀ ಸಕ್ಕರೆ ಕಾರ್ಖಾನೆಗಳಲ್ಲಿ, ಹಾವೇರಿ ಮತ್ತು ಹಾಸನದಲ್ಲಿರುವ

ಎರಡೂ ಘಟಕಗಳು ಯಂತ್ರ ಮತ್ತು ಯಂತ್ರೋಪಕರಣಗಳ ಸರಬರಾಜಿಗಾಗಿ ಕೋರಿಕೆ ಸಲ್ಲಿಸಿದೆ ಮತ್ತು ಈ ಕಾರ್ಖಾನೆಗಳು 1982-83 ರಲ್ಲಿ ಉತ್ಪಾದನೆಯನ್ನು ಪ್ರಾರಂಭಿಸುವ ನಿರೀಕ್ಷೆ ಇದೆ. ಉಡುಪಿ ತಾಲೂಕಿನ ಬ್ರಹ್ಮಾವರದ ಹೊಸ ಘಟಕವು ಬರುವ ವರ್ಷ ಯಂತ್ರ ಮತ್ತು ಯಂತ್ರೋಪಕರಣಗಳ ಸರಬರಾಜಿಗಾಗಿ ಕೋರಿಕೆ ಸಲ್ಲಿಸುವ ನಿರೀಕ್ಷೆ ಇದೆ.

15.1. ಪಶುವೈದ್ಯರ ಮತ್ತು ಜಾನುವಾರು ಇನ್ಸ್‌ಪೆಕ್ಟರುಗಳ ತೀವ್ರ ಕೊರತೆಯಿಂದಾಗಿ ಪಶು ಆರೋಗ್ಯ ಕಾರ್ಯಕ್ರಮದ ಪ್ರಗತಿಗೆ ತೊಂದರೆ ಉಂಟಾಗಿದೆ ಯೆಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಪಶುವೈದ್ಯ ಔಷಧಿಗಳ ಖರೀದಿಯ ಬಗ್ಗೆ ಮಾತ್ರವೇ ಹೆಚ್ಚು ಹಣ ಒದಗಿಸಿಕೊಡುವುದಷ್ಟೇ ಸಾಲದು, ಬೆಂಗಳೂರಿನ ಹೆಬ್ಬಾಳದಲ್ಲಿರುವ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದವರ ಪಶುವೈದ್ಯ ಕಾಲೇಜಿನಲ್ಲಿ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಕ್ರಮವು ಪರಿಶೀಲನೆಯಲ್ಲಿದೆ. ಇದರ ಜೊತೆಗೆ, ಹರಿಜನ ಮತ್ತು ಗಿರಿಜನರಿಗೆ ವಿಶೇಷ ಗಮನ ಕೊಟ್ಟು ಜಾನುವಾರು ಇನ್ಸ್‌ಪೆಕ್ಟರುಗಳ ತರಬೇತಿ ಸೌಲಭ್ಯಗಳನ್ನು ವಿಸ್ತರಿಸಲಾಗುತ್ತಿದೆ. ಬರುವ ವರ್ಷ ಅಮೃತ ಮಹಲ್ ಕಾವಲ್ ಜಮೀನಿನಲ್ಲಿ ಮೇವನ್ನು ಹೆಚ್ಚಾಗಿ ಬೆಳೆಯಲಾಗುವುದು.

15.2. ಕರ್ನಾಟಕ ಡೇರಿ ಅಭಿವೃದ್ಧಿ ನಿಗಮದ ಕಾರ್ಯಚಟುವಟಿಕೆಗಳು, ನೂರಾರು ಗ್ರಾಮಗಳಲ್ಲಿ ಉತ್ಪಾದನೆಯಾದ ಹಾಲಿಗೆ, ಹೆಚ್ಚಿನ ಲಾಭದಾಯಕ ಬೆಲೆ ಗಳನ್ನು ಹಾಲು ಉತ್ಪಾದಕರಿಗೆ ಒದಗಿಸುವುದಕ್ಕೆ ಸಹಾಯಕವಾಗಿವೆ. ಅಧಿಕ ಕ್ಷೀರೋತ್ಪಾದನೆ ಹಂತ I—ಇದರ ಕಾರ್ಯಚಟುವಟಿಕೆಯಿಂದ ಸರ್ಕಾರದವರು ಉತ್ತೇಜಿತರಾಗಿ ಬರುವ ವರ್ಷ ಅಧಿಕ ಕ್ಷೀರೋತ್ಪಾದನಾ ಹಂತ II — ಇದನ್ನು (ಪ್ಲಡ್ ಸ್ಟೇಜ್ II ನ್ನು) ಪ್ರಾರಂಭಿಸುವ ಮೂಲಕ ಡೇರಿ ಚಟುವಟಿಕೆಗಳಲ್ಲಿ ಇನ್ನೂ ಹೆಚ್ಚಿನ ಗುರಿ ಸಾಧಿಸುವ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿಯೊಡನೆ ಸಮಾಲೋಚನೆ ನಡೆಸಿ ವಿವರಗಳನ್ನು ಅಂತಿಮ ಗೊಳಿಸಲಾಗುವುದು.

16. ಕಡಲು ಮೀನುಗಾರಿಕೆ ವಲಯದಲ್ಲಿ, ಚೌಳು ನೀರಿನ ಮೀನು ಕೃಷಿಗೆ (ಬ್ರಾಕಿಷ್ ವಾಟರ್ ಫಿಷ್ ಫಾರ್ಮಿಂಗ್) ಹೆಚ್ಚಿನ ಆದ್ಯತೆ ನೀಡಲಾಗುವುದು. ತೀವ್ರ ಅಭಿವೃದ್ಧಿಗಾಗಿ 50 ಹೆಕ್ಟೇರು ಚೌಳು ನೀರಿನಲ್ಲಿ ಮೀನು ಕೃಷಿಯನ್ನು ಕೈಕೊಳ್ಳಲಾಗುವುದು. ಉತ್ತರ ಕನ್ನಡ ಜಿಲ್ಲೆಯ ತದ್ರಿಯಲ್ಲಿ ಒಟ್ಟು 6.82 ಕೋಟಿ ರೂಪಾಯಿಯ ವೆಚ್ಚದ ಇಂಡೋಡೇನಿಷ್ ಮೀನುಗಾರಿಕೆ ಯೋಜನೆಯನ್ನು 1981-82 ರಲ್ಲಿ ಕಾರ್ಯರೂಪಕ್ಕೆ ತರಲಾಗುವುದು. ಇದರಿಂದಾಗಿ 15.000 ಟನ್‌ಗಳಷ್ಟು ಹೆಚ್ಚು ಮೀನು ಉತ್ಪಾದನೆಯನ್ನು ಸಾಧಿಸಲಾಗುವುದು. ಅಲ್ಲದೆ, ಇದರಿಂದ 500 ಬೆಸ್ತರ ಕುಟುಂಬಗಳಿಗೆ ಪ್ರಯೋಜನವಾಗುವುದು. ಅಲ್ಲದೆ, ವಾಣಿಜ್ಯ ಬಂಡವಾಳ ವೆಚ್ಚದ ಶೇಕಡಾ 25ರಷ್ಟು ಸಹಾಯ ಧನ ನೀಡುವ ಮೂಲಕ ಮರಿ ಮೀನುಗಳನ್ನು ಉತ್ಪಾದಿಸಲು 10 ಘಟಕಗಳಿಗೆ ನೆರವು ನೀಡಲು ಉದ್ದೇಶಿಸಲಾಗಿದೆ.

17. ಕಡಿಮೆ ಕೆಲಸದ ತಿಂಗಳುಗಳಲ್ಲಿ ಕೆಲಸವಿಲ್ಲದ ಲಕ್ಷಾಂತರ ಕಾರ್ಮಿಕರಿಗೆ ಉದ್ಯೋಗ ಒದಗಿಸಿಕೊಡುವುದು ಒಂದು ಅಂಗೀಕೃತ ರಾಷ್ಟ್ರೀಯ ಗುರಿಯಾಗಿದೆ. ನಮ್ಮ ರಾಜ್ಯದಲ್ಲಿ ಮೊದಲು ಪ್ರಾರಂಭಿಸಿದ ಉದ್ಯೋಗ ದೃಢೀಕರಣ ಯೋಜನೆಯು, ಈಗ ರಾಷ್ಟ್ರಮಟ್ಟದ ವಿಷಯವಾಗಿದ್ದು ಅದನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮವಾಗಿ ಕಾರ್ಯರೂಪಕ್ಕೆ ತರಲಾಗುವುದು. ಈ ಕಾರ್ಯಕ್ರಮವನ್ನು ಎಲ್ಲ ಜಿಲ್ಲೆಗಳಲ್ಲಿ ಕಾರ್ಯರೂಪಕ್ಕೆ ತರಲು 12 ಕೋಟಿ ರೂಪಾಯಿಗಳ ಸಮಪಾಲಿನ ವೆಚ್ಚಕ್ಕೆ ಏರ್ಪಾಡು ಮಾಡಲಾಗಿದೆ. ಇದಕ್ಕೆ ಭಾರತ ಸರ್ಕಾರದವರು ಸರಿಸಮಾನವಾದ ಅಂಶದಾನ ನೀಡುತ್ತಾರೆ. ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವಲ್ಲಿ ಸಮಾಜಕ್ಕೆ ಅಗತ್ಯತೆಯಿರುವ ಈ ಮುಂದಿನ ದೀರ್ಘ ಬಾಳಿಕೆಯ ಆಸ್ತಿಗಳನ್ನು ನಿರ್ಮಿಸಲು ಈ ಯೋಜನೆಯನ್ನು ಬಳಸಿಕೊಳ್ಳಲು ಪ್ರಸ್ತಾವಿಸಲಾಗಿದೆ :—

1. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗಾಗಿ ಹೆಚ್ಚಿನ ತರಗತಿ ಕೊಠಡಿಗಳು.
2. ಮಹಿಳಾ ಮಂಡಲ ಕಟ್ಟಡಗಳು.
3. ಅಂಗನವಾಡಿ ಕಟ್ಟಡಗಳು.
4. ವ್ಯಾಯಾಮ ಶಾಲೆಗಳು.
5. ಹರಿಜನ, ಗಿರಿಜನ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹಾಸ್ಟೆಲುಗಳು.
6. ಪ್ರತಿ ಗ್ರಾಮದಿಂದ ಒಳ ಗ್ರಾಮಗಳ ರಸ್ತೆಗಳಿಗೆ ಕೂಡು ರಸ್ತೆಗಳು.
7. ಗ್ರಾಮೀಣ ನೈರ್ಮಲ್ಯ ವ್ಯವಸ್ಥೆ ಮತ್ತು ಒಳಚರಂಡಿ ಸೌಲಭ್ಯಗಳ ಸಂಧಾರಣೆ.

ಈ ಬೃಹತ್ ಗ್ರಾಮೀಣ ಉದ್ಯೋಗ ಕಾರ್ಯಕ್ರಮವನ್ನು ಸಮಸ್ತ ಸಮಾಜಕ್ಕೆ ಉಪಯುಕ್ತವಾಗುವ ಆಸ್ತಿಯನ್ನು ನಿರ್ಮಿಸುವುದಕ್ಕಾಗಿ ಬಳಸಿಕೊಳ್ಳಲು ಸರ್ಕಾರವು ಆಶಿಸಿದೆ.

18.1. ಗ್ರಾಮಾಂತರ ಪ್ರದೇಶದಲ್ಲಿ ಸಂಪರ್ಕ ಸಾಧನಗಳನ್ನು ಅಭಿವೃದ್ಧಿಗೊಳಿಸುವ ಮತ್ತು ತಪ್ಪಿಹೋದ ಸಂಪರ್ಕಗಳನ್ನು ಹಂತಹಂತವಾಗಿ ಪೂರ್ಣಗೊಳಿಸುವುದರ ಜೊತೆಗೆ, ಮಲೆನಾಡು ಪ್ರದೇಶಗಳಲ್ಲಿರುವ ಹೆಚ್ಚಿನ ಸಣ್ಣ ತೊರೆಗಳಿಗೆ ಸಣ್ಣ ಸೇತುವೆಗಳನ್ನು ನಿರ್ಮಿಸುವುದು ಮತ್ತು ಗ್ರಾಮಗಳೊಳಗೆ ಮತ್ತು ಗ್ರಾಮದಿಂದ ಗ್ರಾಮಕ್ಕೆ ಸಂಪರ್ಕ ಸಾಧನಗಳನ್ನು ಸುಧಾರಿಸುವುದು—ಇವೇ ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಸೇತುವೆಗಳ ನಿರ್ಮಾಣ ಕಾರ್ಯಕ್ರಮದ ಮೇರೆಗೆ ಈಗಾಗಲೇ ನಿರ್ಮಾಣ ಹಂತದಲ್ಲಿರುವ ಎಲ್ಲ ಸೇತುವೆಗಳ ಕೆಲಸಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ಯೋಚಿಸಲಾಗಿದೆ. ಈಗಿರುವ ಜಿಲ್ಲೆಯ ಪ್ರಮುಖ ರಸ್ತೆಗಳ ಮತ್ತು ಜಿಲ್ಲೆಯ ಇತರ ರಸ್ತೆಗಳ, ಆಯಕಟ್ಟು ರಸ್ತೆಗಳ, ಮತ್ತು ತಾಲೂಕು ಅಭಿವೃದ್ಧಿ ಮಂಡಲಿಗಳಿಂದ ವಹಿಸಿಕೊಂಡ ರಸ್ತೆಗಳ ನಿರ್ವಹಣೆಯ

ಸಂಧಾರಣೆಗಾಗಿ ಸಹ ವ್ಯವಸ್ಥೆ ಮಾಡಲಾಗಿದೆ. ನಮ್ಮ ಸರ್ಕಾರವು, ಪ್ರಾಥಮಿಕ ಶಾಲಾ ಕಟ್ಟಡಗಳ, ಮಾಧ್ಯಮಿಕ ಶಾಲಾ ಕಟ್ಟಡಗಳ ಮತ್ತು ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಗಳು ನಡೆಸುವ ಸಂಸ್ಥೆಗಳ ಕಟ್ಟಡಗಳ ನಿರ್ವಹಣೆಗಾಗಿ ವಾಸ್ತವಿಕವಾಗಿ ವಹಿಸಿದ ವೆಚ್ಚವನ್ನು ಹೆಚ್ಚಿಸಲು ವ್ಯವಸ್ಥೆ ಮಾಡಿದೆ. ಆದರಿಂದ ಕರ್ನಾಟಕ ರಾಜ್ಯ ರಚನೆಯ ರಜತ ಮಹೋತ್ಸವದ ವರ್ಷದಲ್ಲಿ, ಹಲವು ವರ್ಷಗಳಿಂದ ನಿರ್ಮಿಸಲ್ಪಟ್ಟ ಆಸ್ತಿಗಳನ್ನು ಸೂಕ್ತವಾಗಿ ನಿರ್ವಹಿಸಿಕೊಂಡು ಬಂದಂತಾಗುವುದು.

18.2. ಹಂತಹಂತವಾಗಿ ಕಾರ್ಯಗತಗೊಳಿಸುವ ಕಾರ್ಯಕ್ರಮದ ಆಧಾರದ ಮೇಲೆ ಪ್ರಸಕ್ತ ವರ್ಷ ಸೇತುವೆಗಳ ನಿರ್ಮಾಣ ಮತ್ತು ಹೊಸ ರಸ್ತೆಗಳ ನಿರ್ಮಾಣ ಕಾರ್ಯಕ್ರಮಗಳನ್ನು ಕೈಕೊಳ್ಳುವ ಬಗೆಗಿನ ವಿಷಯವನ್ನು ವಿಧಾನ ಮಂಡಲದ ಉಭಯ ಸದನಗಳ ಅನೇಕ ಸದಸ್ಯರು ಒತ್ತಿ ಹೇಳಿದ್ದಾರೆ. ಈ ಎಲ್ಲ ಉಪಯುಕ್ತ ಸಲಹೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುವುದು. ಕೈಕೊಳ್ಳತಕ್ಕ ಕಾಮಗಾರಿಗಳ ಅಂದಾಜುಗಳನ್ನು ತಯಾರಿಸಲಾಗುವುದು ಮತ್ತು ಈ ಕಾರ್ಯಕ್ರಮಗಳ ಮೇರೆಗೆ ಕೆಲವು ಕಾಮಗಾರಿಗಳನ್ನು ಕ್ರಮೇಣ ಮುಂಬರುವ ವರ್ಷ ಪ್ರಾರಂಭಿಸಲಾಗುವುದು.

ಈ ಕಾರ್ಯಕ್ರಮವು ವರ್ಷದ ಪ್ರಾರಂಭದಲ್ಲಿ ಘೋಷಿಸಿದ ಗ್ರಾಮಾಂತರ ಸಂಪರ್ಕ ಕಾರ್ಯಕ್ರಮಕ್ಕೆ ಪೂರಕವಾಗಿರುತ್ತದೆ.

19. ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಘಗಳ ಪ್ರಯೋಜನ ಪಡೆದುಕೊಂಡು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೀವ್ರಗೊಳಿಸಲು ಸರ್ಕಾರವು ಪ್ರಸ್ತಾಪಿಸಿದೆ. ಅದೇ ಕಾಲಕ್ಕೆ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಘಗಳ ಮತ್ತು ಪಂಚಾಯತ್, ತಾಲೂಕು ಅಭಿವೃದ್ಧಿ ಮಂಡಳಿಗಳ ಮಧ್ಯೆ ಸಂಬಂಧವನ್ನು ಬಲಗೊಳಿಸಲಾಗುವುದು. ಇದರಿಂದ, ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಘಗಳಿಗೆ ಒಪ್ಪಿಸಿದ ಕಾರ್ಯಕ್ರಮಗಳಲ್ಲದೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳನ್ನು ಸಹ ಗ್ರಾಮಾಭಿವೃದ್ಧಿಯ ಹಿತಾಸಕ್ತಿಯಿಂದ ಹೆಚ್ಚು ಪ್ರಭಾವಕಾರಿಯಾಗಿ ಅನುಷ್ಠಾನಕ್ಕೆ ತಂದಂತಾಗುತ್ತದೆ. ಈ ಉದ್ದೇಶವನ್ನು ಸಾಧಿಸುವ ವಿಧಾನಗಳನ್ನು ನಿರಂತರವಾಗಿ ಪರಿಶೀಲಿಸಲಾಗುವುದು.

20. ಈ ವರ್ಷ ಸ್ಟೈಪೆಂಡರಿ ಉದ್ಯೋಗದ ಯೋಜನೆಗೆ ಹೆಚ್ಚು ಗಮನ ನೀಡಲಾಗಿದೆ. ಸ್ಟೈಪೆಂಡರಿ ಪದವೀಧರರನ್ನು ತರಬೇತುಗೊಳಿಸುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಇದರಿಂದ ನಿರುದ್ಯೋಗಿ ಪದವೀಧರರು ತರಬೇತಿ ಅವಧಿಯಲ್ಲಿ, ಉದ್ಯೋಗಕ್ಕೆ ಅವಶ್ಯವಿರುವ ಕೌಶಲವನ್ನು ಪಡೆದು ವಿವಿಧ ವಲಯಗಳಲ್ಲಿ ಉದ್ಯೋಗ ಪಡೆಯಲು ಅಥವಾ ಆರ್ಥಿಕ ನೆರವಿನಿಂದ ಸಣ್ಣ ಉದ್ಯಮಗಳನ್ನು ಆರಂಭಿಸಿ, ಸ್ವಾವಲಂಬಿಗಳಾಗುವುದಕ್ಕೆ ಅನುಕೂಲವಾಗುತ್ತದೆ. ಈ ಕಾರ್ಯಕ್ರಮಗಳನ್ನು ಕ್ರಮಪಡಿಸುವುದರಿಂದ ನಿರುದ್ಯೋಗಿ ಪದವೀಧರರ ಸಂಖ್ಯೆಯು ಕ್ರಮೇಣ ಇಳಿಮುಖವಾಗುತ್ತದೆ.

21·1. ನಮ್ಮ ಸರ್ಕಾರವು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವುದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದೆ. ಅನಾವೃಷ್ಟಿ ಪ್ರದೇಶಗಳಲ್ಲಿ ಕೊರೆ ಬಾವಿಗಳನ್ನು ಮತ್ತು ಸಾಕಷ್ಟು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವುದರ

ಉದ್ದೇಶದಿಂದ ಅನೇಕ 'ರಿಗ್' ಗಳನ್ನು ಕೆಲಸಕ್ಕೆ ತೊಡಗಿಸಿದೆ. ಖನಿಜಗಳ ಮತ್ತು ಭೂವಿಜ್ಞಾನ ನಿರ್ದೇಶನಾಲಯದವರಿಗೂ ಹಾಗೂ ಲೋಕೋಪಯೋಗಿ ಇಲಾಖೆಯ ಜನಾರೋಗ್ಯ ಕಾಮಗಾರಿ ಶಾಖೆಯವರಿಗೂ ಕುಡಿಯುವ ನೀರಿನ ಸ ಲಭ್ಯವನ್ನು ಅತ್ಯಂತ ಆದ್ಯತೆಯ ಮೇರೆಗೆ ಪೂರೈಸುವುದನ್ನು ಸುನಿಶ್ಚಿತಗೊಳಿಸಲು ವ್ಯಾಪಕ ಅಧಿಕಾರವನ್ನು ಕೊಡಲಾಗಿದೆ. ಸರ್ಕಾರವು ಕಡಿಮೆ ವೆಚ್ಚದ ಜನತಾಗೃಹಗಳನ್ನು ಒದಗಿಸುವ ಯೋಜನೆಯಲ್ಲೂ ಬಹಳ ಆಸಕ್ತಿ ಹೊಂದಿದೆ. ಈ ವರ್ಷ ಆರ್ಥಿಕ ಮುಗ್ಗಟ್ಟಿನಿಂದಾಗಿ ಕೇವಲ 50,475 ಗೃಹಗಳ ನಿರ್ಮಾಣ ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆ. ಅಲ್ಲದೆ, 1979-80 ರ ಅವಧಿಯಲ್ಲಿ ಪ್ರಾರಂಭಿಸಿ ಪೂರೈಸದೆ ಇದ್ದ 80,000 ಮನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗುತ್ತಿದೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ನೆರವು 'ಹುಡ್ಕೊ'ವಿನಿಂದ ಬಂದ ನೆರವಿಗೆ ಪೂರಕವಾಗುತ್ತದೆ. ಹೀಗಾಗಿ ಈ ಕಾರ್ಯಕ್ರಮದ ಮೇರೆಗಿನ ಸಮಗ್ರ ಕಾರ್ಯಕ್ರಮವನ್ನು ತ್ವರಿತಗೊಳಿಸಬಹುದು. ಈ ವರ್ಷ ಪೂರ್ಣಗೊಳಿಸಬೇಕಾಗಿದ್ದ 50,000 ಮನೆಗಳ ನಿರ್ಮಾಣದ ಕಾ ರ್ಯ ವ ನ್ನು 1981-82 ರ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು. ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ವಸತಿಹೀನ ನಾಗರೀಕರ ಸರಿಯಾದ ಗಣತಿಯನ್ನು ತೆಗೆದುಕೊಂಡು, ಬರುವ ವರ್ಷ ಒಂದು ಲಕ್ಷ ಮನೆ ನಿವೇಶನಗಳನ್ನು ಹಂಚಬೇಕೆಂದು ಸಹ ಉದ್ದೇಶಿಸಲಾಗಿದೆ.

21·2. ಸರ್ಕಾರವು ಬಳ್ಳಾರಿ ಮತ್ತು ಗದಗ-ಬೆಟಗೇರಿ ಮುಂತಾದ ಪಟ್ಟಣಗಳಲ್ಲಿ ಇರುವ ನೀರಿನ ತೀವ್ರ ಅಭಾವದ ಸಮಸ್ಯೆಯನ್ನು ಪರಿಹರಿಸಲು ತೀವ್ರ ಆಸಕ್ತಿ ಹೊಂದಿದೆ. ಇದಕ್ಕಾಗಿ ಭಾರತದ ಜೀವವಿಮಾ ನಿಗಮದೊಂದಿಗೆ ಸಮಾಲೋಚನೆ ನಡೆಸಿ ಪ್ರಸಕ್ತ ವರ್ಷ ಸೂಕ್ತ ಕ್ರಮಗಳನ್ನು ನಾವು ಕೈಕೊಳ್ಳುತ್ತೇವೆ.

22.1. ಸಹಕಾರಿ ಸಾಲದ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರವು ಕೈಕೊಂಡಿರುವ ನಿಶ್ಚಲ ನಿಲುವಿನ ಅರಿವು ಸದಸ್ಯರಿಗೆ ಇದೆ. ಸಾವಿರಾರು ಸಣ್ಣ ಮತ್ತು ಅತಿ ಸಣ್ಣ ರೈತರು ನಿರಂತರ ಅಭಾವ ಪರಿಸ್ಥಿತಿಯಿಂದ ತೊಂದರೆಗೊಳಗಾಗಿರುವ ಸಂದರ್ಭವನ್ನು ಗಮನಿಸಿ ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಬಾಕಿಯಿರುವ ಬಡ್ಡಿಯನ್ನು ವಜಾ ಮಾಡಲು ಸರ್ಕಾರ ಉದ್ದೇಶಿಸಿದೆ. ಈ ರೈತರಿಗೆ ಇನ್ನೂ ಹೆಚ್ಚಿನ ಪರಿಹಾರವನ್ನು ಒದಗಿಸುವ ಸಲುವಾಗಿ, 1981ರ ಡಿಸೆಂಬರ್ 31ಕ್ಕೆ ಮುಂಚಿತವಾಗಿ ಮೂಲ ಧನವನ್ನು ಪೂರ್ಣವಾಗಿ ಸಂದಾಯ ಮಾಡುವ ಈ ರೈತರಿಗೆ ಹಿಂದಿನ ಅಲ್ಪಾವಧಿ ಸಾಲಗಳನ್ನು ಬಿಟ್ಟುಬಿಡಲಾಗುವುದು. ಇನ್ನು ಮುಂದೆ ಅಲ್ಪಾವಧಿ ಸಾಲಗಳನ್ನು ಪಡೆಯುವ ಸಣ್ಣ ಮತ್ತು ಅತಿ ಸಣ್ಣ ರೈತರು, ರಿಸರ್ವ್ ಬ್ಯಾಂಕು ಅಪೆಕ್ಸ್ ಬ್ಯಾಂಕಿಗೆ ಕೊಡುವ ಸಾಲ ನೀಡಿಕೆಯ ದರದಲ್ಲಿ ಮಾತ್ರ ಬಡ್ಡಿಯನ್ನು ಸಂದಾಯ ಮಾಡಬೇಕಾಗುತ್ತದೆ. ಹೆಚ್ಚಿನ ಬಡ್ಡಿಯನ್ನು ರಾಜ್ಯ ಸರ್ಕಾರವು ಸಹಾಯಧನದ ರೂಪದಲ್ಲಿ ಸಂಬಂಧಪಟ್ಟ ಸಹಕಾರೀ ಸಂಸ್ಥೆಗಳಿಗೆ ಸಂದಾಯ ಮಾಡುತ್ತದೆ.

23. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಆರ್ಥಿಕ ಕಲ್ಯಾಣವನ್ನು ಸಾಧಿಸುವುದು ರಾಜ್ಯದ ಪ್ರಮುಖ ಕಾರ್ಯನೀತಿಯಾಗಿದೆ. ಆರನೇ ಪಂಚವಾರ್ಷಿಕ ಯೋಜನಾವಧಿಗೆ, ಅನುಸೂಚಿತ ಜಾತಿಗಳಿಗಾಗಿ 406 ಕೋಟಿ ರೂಪಾಯಿಗಳ ಒಂದು ವಿಶೇಷ ಘಟಕ ಯೋಜನೆಯನ್ನು ಮತ್ತು ಅನುಸೂಚಿತ ಪಂಗಡದವರಿಗಾಗಿ 30 ಕೋಟಿ ರೂಪಾಯಿಗಳ ಒಂದು ಉಪ ಯೋಜನೆಯನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮವು ಇತರ ಯೋಜನೆಗಳೂ ಸೇರಿ ಈ ಮುಂದಿನ ಅಂಶಗಳನ್ನು ಒಳಗೊಳ್ಳುತ್ತದೆ :

(ಎ) ಅನುಸೂಚಿತ ಜಾತಿಗೆ ಸೇರಿದವರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಸ್ಥಳಗಳಲ್ಲಿ ಶಾಲೆಗಳ ನಿರ್ಮಾಣ ;

(ಬಿ) ಪ್ರೋತ್ಸಾಹಧನ ನೀಡಿಕೆ, ಎಂದರೆ, ವೃತ್ತಿ ಸಂಬಂಧವಾದ ಸೌಲಭ್ಯಗಳಿಗಾಗಿ ಸ್ಟೈಪೆಂಡ್‌ಗಳನ್ನು ನೀಡುವುದು ;

(ಸಿ) ಸ್ವಂತ ಉದ್ಯೋಗಕ್ಕಾಗಿ ಪ್ರಾರಂಭಿಕ ಹಣವೇ ಮುಂತಾದ ಪ್ರೋತ್ಸಾಹ ನೀಡುವುದು ;

(ಡಿ) ಅನಕ್ಷರತೆಯು ನಿರ್ಮೂಲನಾಗುವಂತೆ ನೋಡಿಕೊಳ್ಳಲು ಭಾರತ ಸರ್ಕಾರದ ವಿಶೇಷ ಸಹಾಯಧನ ಪಡೆದು ಬಾಲಕಿಯರಿಗೆ ಮತ್ತು ಬಾಲಕರಿಗೆ ವಸತಿ ಗೃಹಗಳ ನಿರ್ಮಾಣ.

ಮೇಲೆ ಹೇಳಿದ ಕ್ರಮಗಳನ್ನು ಮುಂಬರುವ ವರ್ಷದಲ್ಲಿ ತೀವ್ರವಾಗಿ ಕಾರ್ಯಗತಗೊಳಿಸಲಾಗುವುದು.

24. ಹಿಂದುಳಿದ ವರ್ಗಗಳಿಗೆ ಸೇರಿದ ಗ್ರಾಮೀಣ ಕುಶಲಕರ್ಮಿಗಳ ಸಂಕಷ್ಟ, ಅವರ ಜೀವನ ಪರಿಸ್ಥಿತಿಗಳನ್ನು ಉತ್ತಮಗೊಳಿಸುವ ಸಲುವಾಗಿ ಹೊಸ ಯೋಜನೆಗಳನ್ನು ರೂಪಿಸುವ ಅಗತ್ಯತೆಯನ್ನು ಸಹ ಸರ್ಕಾರವು ಪರಿಶೀಲಿಸಿದೆ. ಪ್ರತಿ ತಾಲ್ಲೂಕಿನಲ್ಲಿ ಸೇವಾ ಸಂಸ್ಥೆಗಳನ್ನು ಸ್ಥಾಪಿಸಲು, ಔದ್ಯಮಿಕ ಸಹಕಾರಿ ಬ್ಯಾಂಕುಗಳ ಮೂಲಕ ಸಾಲದ ನೆರವನ್ನು ನೀಡಲು ಮತ್ತು ಕಚ್ಚಾ ವಸ್ತು, ಸುಧಾರಿತ ಸಾಧನೆಗಳು ಮತ್ತು ತರಬೇತಿ ಸೌಲಭ್ಯಗಳನ್ನು ಒದಗಿಸಲು ಮತ್ತು ಸಿದ್ಧ ಉತ್ಪನ್ನಗಳನ್ನು ಖರೀದಿಸಲು ಹಾಗೂ ಮಾರಾಟ ಮಾಡಲು ಉದ್ದೇಶಿಸಲಾಗಿದೆ. ಈ ಸೇವಾ ಸಂಸ್ಥೆಗಳು ಕರ್ನಾಟಕ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಉಪ ಶಾಖೆಗಳಾಗಿದ್ದು ಸುಮಾರು 1.57 ಲಕ್ಷ ನೇಯ್ಗೆ ಕೆಲಸಗಾರರು, ಕರಕುಶಲ ಕಾರ್ಮಿಕರು, ಮೆರುಗು-ಕೆಲಸಗಾರರು, ನಾರು ಕೆಲಸಗಾರರು, ಬಡಗಿಗಳು, ದರ್ಜಿಗಳು ಮತ್ತು ಇತರ ಕುಶಲಕರ್ಮಿಗಳಿಗೆ ಪ್ರಯೋಜನ ಒದಗಿಸುತ್ತವೆ. 1981-82 ರಲ್ಲಿ ಹಣಕಾಸು ಸಂಸ್ಥೆಗಳಿಂದ ಹಣವನ್ನು ಸಂಗ್ರಹಿಸಲಾಗುವುದು ಮತ್ತು ಕರ್ನಾಟಕ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮಕ್ಕೆ 25 ಲಕ್ಷ ರೂಪಾಯಿಗಳನ್ನು ಪ್ರಾರಂಭಿಕ ಹಂಚಿಕೆಯಾಗಿ ಸರ್ಕಾರವು ನೀಡುತ್ತದೆ. ಈ ಕ್ರಮಗಳನ್ನು ಸೂಚಿಸುವಾಗ ವಿವಿಧ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಗಮನಿಸಲು ಸಮರ್ಪಕ ಜಾಗೃತಾ ಕ್ರಮಗಳನ್ನು ಕೈಗೊಳ್ಳಲು ಮತ್ತು ದಲಿತ

ವರ್ಗದವರ ಹಿತಸಾಧನೆಗೆ ಮಾರಕರಾದಂಥ ಸ್ವಾರ್ಥಪರ ಅಥವಾ ಅನಧಿಕೃತ ಮಧ್ಯವರ್ತಿಗಳ ವಿರುದ್ಧ ಬಿಗಿ ಕ್ರಮ ಕೈಗೊಳ್ಳಲು ಸಹ ಸರ್ಕಾರ ಉದ್ದೇಶಿಸಿದೆ.

25.1. 1981ನೇ ವರ್ಷ ಅಂಗವಿಕಲರ ವರ್ಷ. ಈ ಸಂಬಂಧದಲ್ಲಿ ನಾವು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದೇವೆ :

1. ಅಂಗವಿಕಲ ಮಕ್ಕಳಿಗಾಗಿ ಶಿವಮೊಗ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ 3 ಲಕ್ಷ ರೂಪಾಯಿ ವೆಚ್ಚದಲ್ಲಿ ಎರಡು ಶಾಲೆಗಳನ್ನು ಪ್ರಾರಂಭಿಸುವುದು.

2. ಅಂಗವಿಕಲರಿಗೆ ವೈದ್ಯಕೀಯ ಚಿಕಿತ್ಸೆ ನೀಡುವುದಕ್ಕಾಗಿ ಬೆಂಗಳೂರು, ಬೆಳಗಾಂ ಮತ್ತು ಗುಲ್ಬರ್ಗಾಗಳಲ್ಲಿ ಸುಮಾರು 4.50 ಲಕ್ಷ ರೂಪಾಯಿ ವೆಚ್ಚದಲ್ಲಿ ಮೂರು 'ಟ್ರಾನ್ಸಿಟ್ ಹೋಂ' ಗಳನ್ನು ಪ್ರಾರಂಭಿಸುವುದು.

3. ಅಂಗವಿಕಲರಿಗೆ 3 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭಿಕ ಹಣವನ್ನು ಒದಗಿಸುವುದು ಮತ್ತು ಸ್ವಯಂ ಉದ್ಯೋಗಾವಕಾಶ ಯೋಜನೆಗಳನ್ನು ಪ್ರಾರಂಭಿಸುವುದು.

4. ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ ಮತ್ತು ತರಬೇತಿ ಪಡೆಯುತ್ತಿರುವ ಅಂಗವಿಕಲರಿಗಾಗಿ 1.50 ಲಕ್ಷ ರೂಪಾಯಿ ವೆಚ್ಚದಲ್ಲಿ 50 ಜನರಿಗೆ ಅವಕಾಶವಿರುವ ವಸತಿ ಗೃಹಗಳನ್ನು ಪ್ರಾರಂಭಿಸುವುದು.

25.2. ವೃದ್ಧಾಪ್ಯ ವೇತನ ನೀಡಿಕೆ ಮತ್ತು ವೃದ್ಧಾಪ್ಯ ವೇತನ ಪಡೆಯುವವರ ಹಿತಸಾಧನೆ—ಇವುಗಳನ್ನು ಸಮನ್ವಯಗೊಳಿಸುವ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ನೆರವನ್ನು ಪಡೆಯಲಾಗುವುದು. ಪ್ರತಿಯೊಂದು ಜಿಲ್ಲೆಯಲ್ಲಿ ಗ್ರಾಮೀಣ ಪರಿಹಾರ ಮತ್ತು ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸುವ ಸಲುವಾಗಿ ಸ್ವಯಂಸೇವಾ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ. ಇದರಿಂದಾಗಿ, ಬಡವರ, ಅಂಗವಿಕಲರ, ಮತ್ತು ಮನೋವಿಕಲರ ಯೋಗಕ್ಷೇಮ ನೋಡಿಕೊಳ್ಳಲು ಅನುಕೂಲವಾಗುವುದು.

26.1. ಗ್ರಾಮಾಂತರದ ಅಧಿಕಾರಿಗಳಿಗೆ ಮನೆ ಕಟ್ಟಿಕೊಡುವ ಕೆಲಸವನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಲಿಗೆ ಒಪ್ಪಿಸಲಾಗಿದೆ. ಇದಕ್ಕೆ ಅಗತ್ಯವಾದ ದಾಖಲೆಗಳನ್ನು ಮತ್ತು ಅತ್ಯಗತ್ಯ ಪರಿಕರಗಳ ವಿವರಗಳನ್ನು ಒಪ್ಪಿಸಿ ಮಂಡಲಿಯು 'ಹುಡ್ಕೋ' ಸಂಸ್ಥೆಯ ನೆರವನ್ನು ಕೋರಿದೆ. ಮುಂಬರುವ ವರ್ಷದಲ್ಲಿ ಈ ಯೋಜನೆಯನ್ನು ಆರಂಭಿಸಲು ಯೋಜಿಸಲಾಗಿದೆ. ಇದಲ್ಲದೆ ಪೊಲೀಸರಿಗೆ ವಸತಿ ಸೌಲಭ್ಯಗಳನ್ನು ಹೆಚ್ಚಾಗಿ ನೀಡಬೇಕಾಗಿದೆ. ಮತ್ತು ಈ ಸಂಬಂಧವಾಗಿ ರಾಜ್ಯ ಸರ್ಕಾರಕ್ಕೆ ಅಧಿಕ ನೆರವನ್ನು ನೀಡುವಂತೆ ಭಾರತ ಸರ್ಕಾರವನ್ನು ಕೇಳಿಕೊಳ್ಳಲಾಗಿದೆ.

26.2. ವಿಶ್ವವಿದ್ಯಾಲಯ ನೌಕರರಿಗೆ ವಸತಿ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಗೃಹ ನಿರ್ಮಾಣ ಅಭಿವೃದ್ಧಿ ಹಣಕಾಸು ನಿಗಮವು ನೀಡಲಿರುವ ನೆರವನ್ನು ಪಡೆಯಲು ಸರ್ಕಾರ ಉದ್ದೇಶಿಸಿದೆ. ಇದರಿಂದಾಗಿ, ಗುಲ್ಬರ್ಗ ಮತ್ತು ಮಂಗಳೂರಿನ ಹೊಸ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಇತರ ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ

ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಯವರು ಒಟ್ಟು 600 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಮೂರು ವರ್ಷಗಳವರೆಗೆ 1,200 ರಷ್ಟು ಗೃಹ ಘಟಕಗಳ ಸೌಲಭ್ಯ ಪಡೆಯಬಹುದು.

27. ಕೊಳಚೆ ನಿರ್ಮೂಲನ ಮಂಡಲಿಯ ಕಾರ್ಯಚಟುವಟಿಕೆಗಳನ್ನು ತ್ವರಿತ ಗತಿಯಲ್ಲಿ ಮುಂದುವರಿಸಲಾಗುತ್ತಿದೆ. ಕೊಳಚೆ ನಿರ್ಮೂಲನಾ ಮಂಡಲಿಯು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇರುವ ಅನೇಕ ಕೊಳಚೆ ಪ್ರದೇಶಗಳಲ್ಲಿ ಗೃಹ ನಿರ್ಮಾಣ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ಹಡ್ಕೋ ಸಂಸ್ಥೆಯು ನೆರವು ನೀಡುವ ಯೋಜನೆಗಳಿಗೆ, ಇದೀಗ ಮೊದಲ ಬಾರಿಗೆ ಮಂಜೂರಾತಿಯನ್ನು ಪಡೆದುಕೊಂಡಿದೆ ಎಂಬ ಅಂಶವನ್ನು ತಿಳಿಸಲು ನಾನು ಸಂತೋಷಿಸುತ್ತೇನೆ.

28.1. "ಕ್ರಿ.ಶ. 2,000 ವರ್ಷದ ವೇಳೆಗೆ ಸಕಲರಿಗೂ ಉತ್ತಮ ಆರೋಗ್ಯ"— ಇದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಮಗ್ರ ಧ್ಯೇಯ ವಾಗಿದೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ನಡೆಸುತ್ತಿದ್ದ 201 ಚಿಕಿತ್ಸಾ ಲಯಗಳನ್ನು 1981 ರ ಜುಲೈ ಒಂದರಿಂದ ಸರ್ಕಾರವು ವಹಿಸಿಕೊಳ್ಳಲು ಎಲ್ಲ ಸಿದ್ಧತೆ ಗಳನ್ನು ಮಾಡಿಕೊಂಡಿದೆ ಎಂಬುದನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ. ಹೊಸ ದಾಗಿ ವಹಿಸಿಕೊಳ್ಳಲಾಗಿರುವ ಘಟಕಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳ (ಪ್ರತಿ 50,000 ಜನಸಂಖ್ಯೆಗೆ ಒಂದು) ಪ್ರಾಥಮಿಕ ಆರೋಗ್ಯ ಘಟಕಗಳ (ಪ್ರತಿ 15,000 ಜನಸಂಖ್ಯೆಗೆ ಒಂದು) ಒಟ್ಟು ಕಾರ್ಯನಿರ್ವಹಣೆಯ ದಕ್ಷತೆಯನ್ನು ಸುಧಾರಿಸುವ ದೃಷ್ಟಿಯಿಂದ, ಅವುಗಳನ್ನು ಸಮಗ್ರ ಮೇಲ್ವಿಚಾರಣೆಗೆ ಒಳಪಡಿಸ ಲಾಗುತ್ತದೆ. ರಾಜ್ಯದಲ್ಲಿ ಈ ವರ್ಷವನ್ನು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಸುವರ್ಣ ಮಹೋತ್ಸವ ವರ್ಷವನ್ನಾಗಿ ಆಚರಿಸಲಾಗುತ್ತಿರುವುದರಿಂದ ಜನನ ಸಂಖ್ಯಾ ಪ್ರಮಾಣವನ್ನು ಈಗಿರುವ ಸಾವಿರಕ್ಕೆ 28.8 ರ ಪ್ರಮಾಣದಿಂದ ಈ ದಶಕದ ಕೊನೆಯ ವೇಳೆಗೆ ಸಾವಿರಕ್ಕೆ 25 ರ ಪ್ರಮಾಣಕ್ಕೆ ಇಳಿಸಲು ಸರ್ಕಾರವು ಪ್ರಯತ್ನ ಪಡುತ್ತಿದೆ. ಶಿಕ್ಷಣ ನೀಡುವ ಎಲ್ಲ ಮುಖ್ಯ ಆಸ್ಪತ್ರೆಗಳಲ್ಲೂ ಕಾರ್ಯನಿರ್ವಹಣೆ ಯಲ್ಲಿ ಉಂಟಾಗಬಹುದಾದ ತೊಂದರೆಗಳ ನಿವಾರಣೆಗಾಗಿ ಬದಲಿ ಜನರೇಟರ್‌ಗಳನ್ನು ಒದಗಿಸಬೇಕೆಂದು ನಿರ್ಧರಿಸಲಾಗಿದೆ. ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುವ ಕಾರ್ಯಕ್ರಮದ ಮೇರೆಗೆ ತಾಲೂಕು ಆಸ್ಪತ್ರೆಗಳಲ್ಲಿ ಸುಡುಗಾಯಗಳ ಮತ್ತು ಅಪಘಾತಗಳ ವಾರ್ಡುಗಳನ್ನು, ಪ್ರಕೃತಿ ಚಿಕಿತ್ಸೆ ಘಟಕಗಳನ್ನು, ಕ್ಷ-ಕಿರಣ ಘಟಕ ಗಳನ್ನು ಮತ್ತು ದಂತ ಚಿಕಿತ್ಸಾ ಘಟಕಗಳನ್ನು ತೆರೆಯಲೂ ಸಹ ಸರ್ಕಾರವು ಉದ್ದೇಶಿಸಿದೆ. ಗ್ರಾಮೀಣ ಜನತೆಗೆ ಆರೋಗ್ಯ ರಕ್ಷಣೆಯ ಮಹತ್ವದ ಬಗ್ಗೆ ತಿಳಿಸಿ ಹೇಳುವ ದೃಷ್ಟಿಯಿಂದ ಸರ್ಕಾರವು 9 ವೈದ್ಯಕೀಯ ಕಾಲೇಜುಗಳಿಗೆ ಹೊಂದಿ ಕೊಂಡಂತೆ 27 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದಿದೆ. ಇದರಿಂದಾಗಿ ಪದವೀ ಪೂರ್ವ ಹಾಗೂ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಗ್ರಾಮೀಣ ಪರಿಸರದಲ್ಲಿ ತರಬೇತಿ ಸೌಲಭ್ಯಗಳು ದೊರೆಯುತ್ತವೆ.

28.2. ಮುಂಬರುವ ವರ್ಷ, ಬೆಂಗಳೂರಿನಲ್ಲಿ ಅಪಘಾತ ಚಿಕಿತ್ಸಾಭವನ ವೊಂದನ್ನು ನಿರ್ಮಿಸುವುದಕ್ಕಾಗಿ ಪ್ರಾರಂಭಿಕ ವೆಚ್ಚವಾಗಿ 25 ಲಕ್ಷ ರೂಪಾಯಿಯನ್ನು

ವಿನಿಯೋಗಿಸಲು ಸರ್ಕಾರವು ಉದ್ದೇಶಿಸಿದೆ. ಅನಿರೀಕ್ಷಿತ ಅಪಘಾತಗಳಿಗೆ ತುತ್ತಾದವರಿಗೆ ಇಲ್ಲಿ ಪರಿಣಾಮಕಾರಿ ವೈದ್ಯಕೀಯ ನೆರವು ದೊರೆಯುತ್ತದೆ. ಬೆಂಗಳೂರಿನಲ್ಲಿರುವ ಮುಖ್ಯ ಆಸ್ಪತ್ರೆಗಳ ಪೈಕಿ ಒಂದು ಆಸ್ಪತ್ರೆಗೆ ಆಧುನಿಕ ಸಜ್ಜು ಸಲಕರಣೆಗಳನ್ನೊದಗಿಸಲು 25 ಲಕ್ಷ ರೂಪಾಯಿಯ ವೆಚ್ಚವನ್ನು ವಹಿಸಲೂ ಸಹ ಉದ್ದೇಶಿಸಲಾಗಿದೆ.

29. ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾದ ವರ್ಗದವರಿಗೆ ಉಚಿತ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ನೀಡಲು ಹಾಗೂ ಉನ್ನತ ಶಿಕ್ಷಣಕ್ಕೆ ಸಹಾಯ ಧನ ನೀಡಲು ರಾಜ್ಯ ಸರ್ಕಾರ ಬದ್ಧವಾಗಿದೆಯೆಂಬುದು ಸರ್ವವಿದಿತ. ಶಿಕ್ಷಣಕ್ಕಾಗಿ ವಹಿಸಬೇಕಾದ ವೆಚ್ಚದ ಪ್ರಮಾಣವು ಏಳನೆಯ ಹಣಕಾಸು ಆಯೋಗವು ಈ ಹಿಂದೆ ಊಹಿಸಿದ ಮೊತ್ತಕ್ಕಿಂತ ಗಣನೀಯವಾಗಿ ಹೆಚ್ಚಾಗಿದೆ. ಆದ್ದರಿಂದ, ವಿದ್ಯಾರ್ಥಿ—ಉಪಾಧ್ಯಾಯರ ನಡುವಣ ದಾಮಾಶೆ, ಪ್ರತಿವರ್ಗದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ, ಹೊಸ ಸಂಸ್ಥೆಗಳು ಸಹಾಯಾನುದಾನಕ್ಕೆ ಅರ್ಹವಾಗಲು ಅಗತ್ಯವಾದ ಅವಧಿ ಮುಂತಾದವುಗಳಿಗೆ ಸಂಬಂಧಪಟ್ಟ ಸೂತ್ರಗಳನ್ನು ಹೊಸದಾಗಿ ಪರ್ಯಾಲೋಚಿಸುವುದು ಅವಶ್ಯಕವಾಗಿದೆ. ಆದ್ದರಿಂದ ಸಹಾಯಾನುದಾನ ಸಂಹಿತೆಯನ್ನು ಸೂಕ್ತವಾಗಿ ಮಾರ್ಪಾಟುಗೊಳಿಸಬೇಕಾಗಿದೆ. ಅಲ್ಲದೆ, ಶೈಕ್ಷಣಿಕ ಸಂಸ್ಥೆಗಳ ಆಡಳಿತ ಮತ್ತು ನಿರ್ವಹಣೆಗಳಲ್ಲಿ ಜನತೆಯು ಪಾಲ್ಗೊಳ್ಳುವಂತೆ ಸರ್ಕಾರವು ಪ್ರೋತ್ಸಾಹ ನೀಡುವುದು ಅವಶ್ಯವಾಗಿದೆ. ಇದರಿಂದಾಗಿ ಜನತೆಯು ಇತರ ವರ್ಗಗಳ ಹಿತಕ್ಕೆ ಪ್ರತಿಕೂಲವಾಗದಂತೆ ಶಿಕ್ಷಣದ ಸಂಬಂಧದಲ್ಲಿ ಹೆಚ್ಚುತ್ತಿರುವ ಹೊಣೆಗಾರಿಕೆಯನ್ನು ಜನತೆ ಸ್ವಲ್ಪಮಟ್ಟಿಗಾದರೂ ವಹಿಸುವುದು ಸಾಧ್ಯವಾಗುತ್ತದೆ. ಇನ್ನು ಮುಂದೆ ಸಾಮಾನ್ಯ ಶಿಕ್ಷಣಕ್ಕೆ ಮಾತ್ರವೇ ಅಲ್ಲದೆ ಉದ್ಯೋಗ ತರಬೇತಿ ಹಾಗೂ ತಾಂತ್ರಿಕ ಹಾಗೂ ವೃತ್ತಿ ತರಬೇತಿಗೂ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾಗಿದೆ. ಆದ್ದರಿಂದ ಮಂಡ್ಯ ಮತ್ತು ಚಿಕ್ಕಮಗಳೂರಿನಲ್ಲಿ ಹೊಸ ಔದ್ಯಮಿಕ ತರಬೇತಿ ಸಂಸ್ಥೆ, ಔದ್ಯಮಿಕ ತರಬೇತಿ ಕೇಂದ್ರಗಳನ್ನು ಹಾಗೂ ಬೆಂಗಳೂರಿನಲ್ಲಿ ಇನ್ನೂ ಒಂದು ಔದ್ಯಮಿಕ ತರಬೇತಿ ಸಂಸ್ಥೆಯನ್ನು ತೆರೆಯಲು ಸರ್ಕಾರವು ನಿರ್ಧರಿಸಿದೆ. ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳ ನಿರ್ವಹಣೆ ಹಾಗೂ ಚಾಲನೆಯ ಬಗ್ಗೆ ಶಿಕ್ಷಣ ನೀಡುವ ಯೋಜನೆಗಳನ್ನೂ ಸಹ ಕೈಗೊಳ್ಳಲಾಗುತ್ತದೆ. ಡೀಸೆಲ್ ಮತ್ತು ವಿದ್ಯುತ್ ಪಂಪ್‌ಸೆಟ್ಟುಗಳು, ಕೃಷಿ ಉಪಕರಣಗಳು, ಟ್ರ್ಯಾಕ್ಟರುಗಳು ಮುಂತಾದವುಗಳನ್ನು ದುರಸ್ತಿ ಮಾಡಲು ಗ್ರಾಮೀಣ ಯುವ ಜನತೆಗೆ ತರಬೇತಿ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಔದ್ಯಮಿಕ ತರಬೇತಿ ಸಂಸ್ಥೆಗಳಲ್ಲಿ ಅಲ್ಪಾವಧಿ ತರಗತಿಗಳನ್ನು ತೆರೆಯಲಾಗುತ್ತದೆ. ರಾಜ್ಯದಲ್ಲಿ ಫೋರ್‌ಮನ್ನುಗಳ ಇನ್ನೂ ಒಂದು ತರಬೇತಿ ಕೇಂದ್ರವನ್ನು ತೆರೆಯುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಡೇನಿಷ್ ಸಹಯೋಗದೊಂದಿಗೆ ದಕ್ಷತೆಯಿಂದ ಕಾರ್ಯನಿರ್ವಹಿಸಿರುವ ಬೆಂಗಳೂರಿನ ಸರ್ಕಾರಿ ಉಪಕರಣ ಗೃಹ ಮತ್ತು ತರಬೇತಿ ಕೇಂದ್ರವು ಮುಂದಿನ ವರ್ಷದಲ್ಲಿ ಹುಬ್ಬಳ್ಳಿ ಮತ್ತು ಮಂಗಳೂರುಗಳಲ್ಲಿ ಶಾಖೆಗಳನ್ನು ತೆರೆಯಲಿದೆ.

30. ಪ್ರಸಕ್ತ ವರ್ಷ ಗುಲ್ಬರ್ಗ ಮತ್ತು ಮಂಗಳೂರುಗಳಲ್ಲಿ ಎರಡು ಹೊಸ ವಿಶ್ವವಿದ್ಯಾಲಯಗಳನ್ನು ತೆರೆಯಲಾಗಿದೆ. ವಿಶ್ವವಿದ್ಯಾಲಯ ಅನುದಾನ ಆಯೋಗದ ವ್ಯಾಪ್ತಿಯೊಳಗೆ ಈ ವಿಶ್ವವಿದ್ಯಾಲಯಗಳನ್ನು ಸೇರಿಸುವುದಕ್ಕೆ ಮುಂಚಿತೆ

‘ಸ್ಥಳದಲ್ಲಿಯೇ’ ಒದಗಿಸಬೇಕಾದ ಕೆಲವು ಕನಿಷ್ಠ ಸೌಲಭ್ಯಗಳು ಇರಲೇಬೇಕೆಂದು ವಿಶ್ವವಿದ್ಯಾಲಯ ಅನುದಾನ ಆಯೋಗವು ಕಡ್ಡಾಯಪಡಿಸುತ್ತದೆ. ಆದ್ದರಿಂದ ಈ ಎರಡು ವಿಶ್ವವಿದ್ಯಾಲಯಗಳ ಬಂಡವಾಳ ವೆಚ್ಚದ ಬಗ್ಗೆ 150 ಲಕ್ಷ ರೂಪಾಯಿಯನ್ನು ನಾವು ಮುಂದಿನ ವರ್ಷದಲ್ಲಿ ಒದಗಿಸಲಿದ್ದೇವೆ.

31.1. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿರುವ ಚಾಲ್ತಿ ರಿಜಿಸ್ಟರುಗಳನ್ನು ಹೆಚ್ಚು ಉಪಯುಕ್ತವನ್ನಾಗಿ ಮಾಡುವ ಮತ್ತು ನ್ಯೂನತೆಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ವಿವರಗಳನ್ನು ಯಾಂತ್ರಿಕ ನೆರವಿನಿಂದ ಸುವ್ಯವಸ್ಥಿತವಾಗಿ ಇಡಲು ಸರ್ಕಾರ ಉದ್ದೇಶಿಸಿದೆ. ಇದರಿಂದ ನಿರುದ್ಯೋಗಿಗಳಾಗಿರುವ ಅರ್ಹ ಅಭ್ಯರ್ಥಿಗಳ ಬಗ್ಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಅಂದಂದಿನವರೆಗಿನ ಮಾಹಿತಿಯನ್ನು ಪಡೆಯಲು ಖಾಸಗಿ ನಿಯೋಜಕರಿಗೆ ಮತ್ತು ಸರ್ಕಾರಿ ಇಲಾಖೆಗಳಿಗೆ ಸಾಧ್ಯವಾಗುತ್ತದೆ.

31.2. ಔದ್ಯಮಿಕ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆಯುತ್ತಿರುವ ಹಿಂದುಳಿದ ವರ್ಗಗಳ ಹಾಗೂ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ವಿದ್ಯಾರ್ಥಿಗಳಿಗೆ ಕೊಡಲಾಗುತ್ತಿರುವ ಸ್ಟೈಪೆಂಡನ್ನು ತಿಂಗಳಿಗೆ 50 ರೂಪಾಯಿಗೆ ಏರಿಸಲು ನಿರ್ಧರಿಸಲಾಗಿದೆ. ಅಪ್ರೆಂಟಿಸ್‌ಶಿಪ್ ಮೇರೆಗಿನ ಯೋಜನೆಯಲ್ಲಿ ಹೆಚ್ಚಿಗೆ 2,000 ಅಪ್ರೆಂಟೀಸ್‌ಗಳನ್ನು ಸೇರಿಸಿಕೊಳ್ಳುವ ವ್ಯವಸ್ಥೆ ಮಾಡಲಾಗುವುದು.

32. ಇತ್ತೀಚಿನ ಕ್ಷಾಮ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಗಣಿ ಮತ್ತು ಭೂಗರ್ಭ ಶಾಸ್ತ್ರ ಇಲಾಖೆಯಲ್ಲಿನ ಅಂತರ್ಜಲ ಮತ್ತು ಮೇಲ್ಮೈ ಜಲ ಸಂಸ್ಥೆಯನ್ನು ಬಲಪಡಿಸಲಾಗಿದೆ. ಕಪ್ಪು ಕಲ್ಲನ್ನು (ಬ್ಲಾಕ್ ಡೈಕ್) ಅಗೆದು ತೆಗೆಯುವ ಮತ್ತು ರಫ್ತು ಮಾಡುವ ಹಕ್ಕನ್ನು ಸರ್ಕಾರ ತಾನೇ ಉಳಿಸಿಕೊಂಡಿದೆ. ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯು ಮೊದಲ ಕಂತಿನ ಸರಕನ್ನು ಸದ್ಯದಲ್ಲೇ ರಫ್ತು ಮಾಡಲಿದೆ.

33.1. ಸರ್ಕಾರಿ ಉದ್ಯಮಗಳ ಕ್ಷೇತ್ರದಲ್ಲಿ ಉದ್ಯಮಗಳ ಕಾರ್ಯಸಾಮರ್ಥ್ಯ, ದಕ್ಷತೆ ಮತ್ತು ಅವುಗಳಿಂದ ಪಡೆಯುವ ಲಾಭದ ಪ್ರಮಾಣವನ್ನು ಉತ್ತಮಗೊಳಿಸಲು ಸರ್ಕಾರವು ಸತತವಾಗಿ ಪ್ರಯತ್ನಿಸುತ್ತದೆ. ನಿಷ್ಕ್ರಿಯ ಹಾಗೂ ಅನಾವಶ್ಯಕ ಮಂಡಲಿ ಮತ್ತು ಸಮಿತಿಗಳನ್ನು ರದ್ದುಗೊಳಿಸುವ ಕ್ರಮಗಳನ್ನು ಪ್ರಾರಂಭಿಸಲಾಗಿದೆ. ಸರ್ಕಾರಿ ಉದ್ಯಮಗಳ ಮುಖ್ಯ ಕಾರ್ಯನಿರ್ವಾಹಕರ ಕಚೇರಿಗಳನ್ನು ಆಯಾ ಕಾರ್ಯಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಈ ಉದ್ಯಮಗಳ ಚಟುವಟಿಕೆಗಳನ್ನು ನಿಯಂತ್ರಿಸಲು ಮತ್ತು ಸೇ[illegible] ಹಾಗೂ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ಸರ್ಕಾರಿ ಉದ್ಯಮಗಳ ಬ್ಯೂರೋ ಒಂದನ್ನು ಸ್ಥಾಪಿಸಲಾಗಿದೆ. ಈ ವರ್ಷದಲ್ಲಿ ಸರ್ಕಾರಿ ವಲಯದ ಕಂಪನಿಗಳ ಮತ್ತು ಕಾರ್ಪೊರೇಷನ್ನುಗಳ ಕಾರ್ಯನಿರ್ವಹಣೆಯು ಸುಧಾರಣೆಯ ಹಾದಿಯಲ್ಲಿದೆ ಎಂಬುದನ್ನು ತಿಳಿಸಲು ಸಂತೋಷಿಸುತ್ತೇನೆ. ಹಟ್ಟಿ ಚಿನ್ನದ ಗಣಿ ಲಿಮಿಟೆಡ್ ಮತ್ತು ಮೈಸೂರು ಮಿನರಲ್ಸ್ ಲಿಮಿಟೆಡ್‌ನಂಥ ಘಟಕಗಳು (ತೆರಿಗೆ ಸಂದಾಯ ಮಾಡುವುದಕ್ಕೆ ಮುಂಚೆ) ಅನುಕ್ರಮವಾಗಿ 384 ಲಕ್ಷ ರೂಪಾಯಿಗಳು ಮತ್ತು 48.52 ಲಕ್ಷ ರೂಪಾಯಿಗಳ ಲಾಭವನ್ನು. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಲಿಮಿಟೆಡ್ ಸಂಸ್ಥೆಯು 490 ಲಕ್ಷ

ರೂಪಾಯಿಗಳ ಲಾಭವನ್ನೂ ಗಳಿಸಿವೆ. ಮೈಸೂರು ಷುಗರ್ ಕಂಪನಿ ಲಿಮಿಟೆಡ್ ಮತ್ತು ಕರ್ನಾಟಕ ವಿದ್ಯುತ್ ಕಾರ್ಖಾನೆ ಲಿಮಿಟೆಡ್ ಸಂಸ್ಥೆಗಳೂ ಸಹ ಈ ವರ್ಷ ತಮ್ಮ ಕಾರ್ಯಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿವೆ. ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯು ತನ್ನ ವಿಸ್ತರಣಾ ಕಾರ್ಯವನ್ನು ದಕ್ಷತೆಯಿಂದ ರೂಪಿಸಿದ್ದು, 145 ಕೋಟಿ ರೂಪಾಯಿಗಳ ಈ ವಿಸ್ತರಣಾ ಕಾರ್ಯವನ್ನು ಮುಂದಿನ ವರ್ಷದಲ್ಲಿ ಪೂರ್ಣಗೊಳಿಸುವ ನಿರೀಕ್ಷೆಯಿದೆ. ಇದರಿಂದಾಗಿ ವರ್ಷಕ್ಕೆ 75,000 ಟನ್ನುಗಳ ನ್ಯೂಸ್ ಪ್ರಿಂಟ್ ಮತ್ತು ಇತರ ವಸ್ತುಗಳ ಉತ್ಪಾದನೆಯ ಕಾರ್ಯಾರಂಭ ಮಾಡಲು ಕಂಪನಿಗೆ ಸಾಧ್ಯವಾಗುತ್ತದೆ. ಸರ್ಕಾರಿ ಸಾಬೂನು ಕಾರ್ಖಾನೆ ಮತ್ತು ಗಂಧದೆಣ್ಣೆ ಕಾರ್ಖಾನೆಗಳನ್ನು ಕರ್ನಾಟಕ ಸಾಬೂನು ಮತ್ತು ಡಿಟರ್ಜೆಂಟ್ ಲಿಮಿಟೆಡ್ ಎಂಬ ಹೆಸರಿನಲ್ಲಿ ಪುನರ್ರಚಿಸಲಾಗಿದೆ. ಈ ಉದ್ಯಮದಲ್ಲಿ ಪ್ರಸಾದನ ಸಾಬೂನು ಉತ್ಪಾದನೆಯನ್ನು ವರ್ಷಕ್ಕೆ 6,000 ಟನ್ನುಗಳಿಂದ 26,000 ಟನ್ನುಗಳಿಗೆ ವಿಸ್ತರಿಸುವ ಕಾರ್ಯವನ್ನು ಪ್ರಾರಂಭಿಸಲಾಗಿದೆ ಮತ್ತು ಇದನ್ನು 1983-84 ರಲ್ಲಿ 15 ಕೋಟಿ ರೂಪಾಯಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗುತ್ತದೆ. ಸಾಬೂನು ತಯಾರಿಕೆಯಲ್ಲಿ ಪ್ರಾಣಿಗಳ ಕೊಬ್ಬನ್ನು ಬಳಸುವುದಕ್ಕೆ ಬದಲಾಗಿ ಖಾದ್ಯೇತರ ತೈಲಗಳನ್ನು ಬಳಸುವ ಬಗ್ಗೆ ಕರ್ನಾಟಕ ಸಾಬೂನು ಮತ್ತು ಡಿಟರ್ಜೆಂಟ್ ಲಿಮಿಟೆಡ್ ಕಾರ್ಖಾನೆಯು 'ಫ್ಯಾಟಿಆಸಿಡ್' ಸ್ಥಾವರವೊಂದನ್ನು ಈಗಾಗಲೇ ಸ್ಥಾಪಿಸಿದೆ.

33.2. ಪ್ರಸಕ್ತ ವರ್ಷ, ಬೃಹತ್ ಹಾಗೂ ಮಧ್ಯಮ ವಲಯಗಳ ಉದ್ಯಮಗಳಲ್ಲಿ ಬಂಡವಾಳ ಹೂಡಲು ಸೂಕ್ತ ವಾತಾವರಣ ಉಂಟಾಗಿದೆ. ಸುಮಾರು 76 ಕೋಟಿ ರೂಪಾಯಿಯಷ್ಟು ಬಂಡವಾಳ ಹೂಡಬಹುದಾದ 49 ಅರ್ಜಿಗಳನ್ನು ತಾಂತ್ರಿಕ ಅಭಿವೃದ್ಧಿ ಮಹಾ ನಿರ್ದೇಶನಾಲಯದಲ್ಲಿ ನೋಂದಾಯಿಸಲಾಗಿದೆ. 137 ಕೋಟಿ ರೂಪಾಯಿಯಷ್ಟು ಬಂಡವಾಳ ಹೂಡುವ ಸಾಧ್ಯತೆ ಇರುವ 78 ಲೈಸೆನ್ಸ್ ಆಶಯ ಪತ್ರಗಳನ್ನು ನೀಡಲಾಗಿದೆ. ಸಣ್ಣ ಪ್ರಮಾಣದ ಉದ್ಯಮ ವಲಯದಲ್ಲಿ 1,805 ಘಟಕಗಳಿಗೆ ಖಾಯಂ ನೋಂದಣಿ ಪ್ರಮಾಣಪತ್ರಗಳನ್ನು ನೀಡಲಾಗಿದೆ ಹಾಗೂ ಈ ಘಟಕಗಳಲ್ಲಿ ಹೂಡಬಹುದಾದ ಬಂಡವಾಳ ಸುಮಾರು 19 ಕೋಟಿ ರೂಪಾಯಿ. ಕರ್ನಾಟಕದಲ್ಲಿ ಈಗ ಔದ್ಯಮಿಕ ವಾತಾವರಣವು ಗಣನೀಯವಾಗಿ ಸುಧಾರಿಸಿದ್ದು ಇನ್ನು ಮುಂದೆ ಉದ್ಯಮಗಳು ತೀವ್ರಗತಿಯಿಂದ ಅಭಿವೃದ್ಧಿ ಹೊಂದುತ್ತವೆ.

34.1. ಕರ್ನಾಟಕ ಕೈಮಗ್ಗ ಅಭಿವೃದ್ಧಿ ಕಾರ್ಪೊರೇಷನ್ನು, ಕೈಮಗ್ಗ ರೇಷ್ಮೆ ಉದ್ಯಮವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ, ಪ್ರಸ್ತುತ ಹತ್ತಿ ನೂಲು ನೇಯುತ್ತಿರುವ ಮಗ್ಗಗಳ ಪೈಕಿ 15,000ದಷ್ಟು ಮಗ್ಗಗಳನ್ನು ರೇಷ್ಮೆ ನೂಲು ನೇಯುವ ಮಗ್ಗಗಳಾಗಿ ಪರಿವರ್ತಿಸುವ ಬಗ್ಗೆ ಒಂದು ಯೋಜನೆಯನ್ನು ರೂಪಿಸಿದೆ. ಈ ಯೋಜನೆಗೆ ಸುಮಾರು 40 ಕೋಟಿ ರೂಪಾಯಿಯಷ್ಟು ಅಂದಾಜು ವೆಚ್ಚ ತಗುಲಲಿದ್ದು, ಅದು ಪ್ರಸ್ತುತ ವಿಶ್ವಬ್ಯಾಂಕಿನ ಪರಿಶೀಲನೆಯಲ್ಲಿದೆ. ಈಗ ಸಕ್ರಿಯವಾಗಿ ಕಾರ್ಯಾರಂಭ ಮಾಡಿರುವ 80 ಕೋಟಿ ರೂಪಾಯಿ ವೆಚ್ಚದ ವಿಶ್ವ ಬ್ಯಾಂಕ್ ನೆರವಿನ ರೇಷ್ಮೆ ವ್ಯವಸಾಯ ಯೋಜನೆಗೆ ಈ ಯೋಜನೆಯು

ಪೂರಕವಾಗಿದೆ. ರೇಷ್ಮೆ ವಿನಿಮಯ ಕೇಂದ್ರವು ಈ ವರ್ಷ ತನ್ನ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಿದೆ ಹಾಗೂ ಚಿಕ್ಕಬಳ್ಳಾಪುರ, ರಾಮನಗರ ಮತ್ತು ಕೊಳ್ಳೇಗಾಲಗಳಲ್ಲಿ ಇನ್ನೂ ಮೂರು ರೇಷ್ಮೆ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಿದೆ. ರೇಷ್ಮೆ ಉದ್ಯಮದಲ್ಲಿ ನಷ್ಟವುಂಟಾಗದಂತೆ ರೈತರಿಗೆ ರಕ್ಷಣೆಯೊದಗಿಸುವ ಸಲುವಾಗಿ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪೆನಿಯ ನೆರವಿನೊಂದಿಗೆ 1980ರ ನವೆಂಬರ್ ತಿಂಗಳಲ್ಲಿ 'ಬೈವೋಲ್ಟಿನ್' ರೇಷ್ಮೆ ಹುಳದ (ಪೊಟ್ಟೆ) ಬಗ್ಗೆ ವಿಮಾ ಯೋಜನೆಯನ್ನು ರೂಪಿಸಲಾಗಿದೆ.

34·2. ನೆದರ್ಲೆಂಡ್ ಸರ್ಕಾರದ ಆರ್ಥಿಕ ನೆರವು ಪಡೆದು, ಗ್ರಾಮೀಣ, ಗುಡಿ ಕೈಗಾರಿಕೆ ಮತ್ತು ಸಣ್ಣ ಪ್ರಮಾಣದ ಉದ್ಯಮಗಳಿಗಾಗಿ ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸುವ ಸಲುವಾಗಿ ಒಂದು ಕಾರ್ಯಕ್ರಮವನ್ನು ರೂಪಿಸಲಾಗಿದೆ. ಒಟ್ಟು 18 ಕೋಟಿ ರೂಪಾಯಿ ಆರ್ಥಿಕ ನೆರವಿನೊಂದಿಗೆ ಐದು ವರ್ಷಗಳಲ್ಲಿ ವೈಯಕ್ತಿಕ ಪ್ರಯೋಜನದಾರರಿಗೆ, 5,566 ಷೆಡ್ಡುಗಳನ್ನು ಹಾಗೂ 163 ಸಾಮೂಹಿಕ ಸೌಕರ್ಯಗಳಿರುವ ಕೇಂದ್ರಗಳನ್ನು ನಿರ್ಮಿಸಲಾಗುವುದು. ರಾಜ್ಯದಲ್ಲಿ ತೆಂಗಿನ ನಾರಿನ ಉದ್ಯಮವನ್ನು ಅಭಿವೃದ್ಧಿಪಡಿಸುವ ಸಲುವಾಗಿ, 30,000 ಜನರಿಗೆ ಉದ್ಯೋಗಾವಕಾಶವಿರುವ ಹಾಗೂ 145 ಲಕ್ಷ ರೂಪಾಯಿ ಅಂದಾಜು ವೆಚ್ಚದ ಒಂದು ಮಹಾ ಯೋಜನೆಯನ್ನು ರೂಪಿಸಲಾಗಿದೆ.

35. ಆಹಾರಧಾನ್ಯಗಳನ್ನು ಮತ್ತು ಅವಶ್ಯ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ಹಂಚುವುದನ್ನು ಖಚಿತಪಡಿಸುವ ದೃಷ್ಟಿಯಿಂದ, 70 ಲಕ್ಷ ಪಡಿತರ ಚೀಟಿಗಳನ್ನು ನೀಡಲು ಆಹಾರ ಮತ್ತು ನಾಗರಿಕ ಸರಬರಾಜು ನಿರ್ದೇಶನಾಲಯವು ವ್ಯವಸ್ಥೆ ಮಾಡಿದೆ. ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮವು ಲೆವಿ ಸಕ್ಕರೆ ವಿತರಣೆಯ ವ್ಯವಸ್ಥೆ ಮಾತ್ರವಲ್ಲದೆ, ಈ ವರ್ಷ ಮುಕ್ತ ಮಾರುಕಟ್ಟೆ ಸಕ್ಕರೆ ಮತ್ತು ಗೋಧಿ ಉತ್ಪನ್ನ ವಸ್ತುಗಳನ್ನು ವಿತರಣೆಮಾಡುವ ವ್ಯವಸ್ಥೆಯನ್ನು ಸಹ ಕೈಗೊಂಡಿದೆ. ಈ ವರ್ಷ, ಕಡಲೇಕಾಯಿ ಎಣ್ಣೆಗೆ ಬದಲಾಗಿ ಅಗ್ಗದ ದರದಲ್ಲಿ ಪಾಮೋಲಿನ್ ಎಣ್ಣೆಯನ್ನು ವಿತರಣೆಮಾಡುವ ಕಾರ್ಯವನ್ನೂ ಸಹ ಕೈಗೊಳ್ಳಲಾಗಿದೆ ಹಾಗೂ 3,659 ಮೆಟ್ರಿಕ್ ಟನ್ನುಗಳಷ್ಟು ಎಣ್ಣೆಯನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ಸರಬರಾಜು ಮಾಡಲಾಗಿದೆ. ಈ ವರ್ಷ ಈ ನಿಗಮದ ಆರ್ಥಿಕ ಪರಿಸ್ಥಿತಿಯು ಸುಧಾರಿಸಬಹುದೆಂದು ಮತ್ತು ಇಲ್ಲಿಯವರೆಗಿನ ಸಂಚಿತ ನಷ್ಟಗಳನ್ನು ತುಂಬಿಕೊಳ್ಳಲು ಪ್ರಾರಂಭಿಸಬಹುದೆಂದು ನಿರೀಕ್ಷಿಸಲಾಗಿದೆ.

36. ವನ್ಯ ಮೃಗಗಳನ್ನು ಸಂರಕ್ಷಿಸಿ ಅವುಗಳನ್ನು ಕಾಪಾಡುವ ಬಗ್ಗೆ ಮತ್ತು ಮಕ್ಕಳಲ್ಲಿ ಅವುಗಳ ಬಗ್ಗೆ ಸರಿಯಾದ ತಿಳುವಳಿಕೆ ಉಂಟಾಗುವಂತೆ ಮಾಡಲು ಸರ್ಕಾರದವರು, ಚಿಕ್ಕ ಮಕ್ಕಳ ಸಲುವಾಗಿ ಪ್ರಕೃತಿ ಶಿಕ್ಷಣ ಯೋಜನೆಯೊಂದನ್ನು ರೂಪಿಸಿದ್ದಾರೆ. ಈ ಯೋಜನೆಯ ಮೇರೆಗೆ ಶಾಲಾ ಮಕ್ಕಳಿಗೆ ಅರಣ್ಯ ಹಾಗೂ ವನ್ಯಮೃಗಗಳನ್ನು ವೀಕ್ಷಿಸುವ ಅವಕಾಶಗಳನ್ನು ಕಲ್ಪಿಸಲಾಗುವುದು. ಸರ್ಕಾರವು ಸಾಮಾಜಿಕ ಅರಣ್ಯ ನಿರ್ಮಾಣ ಕಾರ್ಯಕ್ರಮದ ಜೊತೆಗೆ ಪೂರಕ ಪರಿಹಾರ ಅರಣ್ಯ ನಿರ್ಮಾಣ ಯೋಜನೆಗಳನ್ನೂ ಕೈಕೊಂಡಿದೆ.

37. ಸಾರ್ವಜನಿಕರ ಕಲ್ಯಾಣಕ್ಕಾಗಿ ಈ ಎಲ್ಲ ಕಾರ್ಯಕ್ರಮಗಳನ್ನು ನಿರ್ವಹಿಸು ವುದರ ಜೊತೆಗೆ ಸರ್ಕಾರಿ ನೌಕರರ ಕಲ್ಯಾಣದತ್ತ ಕೂಡ ಸಾಕಷ್ಟು ಗಮನ ನೀಡ ಬೇಕಾದ ಆವಶ್ಯಕತೆಯನ್ನು ಸರ್ಕಾರವು ಮನಗಂಡಿದೆ. ಈ ವರ್ಷದಲ್ಲಿ, ಆರ್ಥಿಕ ಮುಗ್ಗಟ್ಟಿನ ಜೊತೆಗೆ ಏರುತ್ತಿರುವ ಜೀವನ ವೆಚ್ಚಗಳನ್ನು ಸರಿದೂಗಿಸುವ ಸಲುವಾಗಿ ಒಂದು ಪೂರ್ಣವರ್ಷದಲ್ಲಿ 40 ಕೋಟಿ ರೂಪಾಯಿ ವೆಚ್ಚದಲ್ಲಿ ಐದು ಕಂತುಗಳ ತುಟ್ಟಿಭತ್ಯಗಳನ್ನು ಮಂಜೂರು ಮಾಡಲಾಗಿದೆ. ಈಗ ಕರ್ನಾಟಕ ಜೀವ ವಿಮಾ ಇಲಾಖೆಯಲ್ಲಿ ಪ್ರತಿಯೊಬ್ಬ ಸರ್ಕಾರಿ ನೌಕರನೂ ವಿಮೆ ಮಾಡುವುದು ಕಡ್ಡಾಯ ವಾದ ಕಲ್ಯಾಣ ಕ್ರಮವಾಗಿದೆ. ಆದರೆ ಈಗಿರುವ ಕುಟುಂಬ ಸೌಲಭ್ಯ ನಿಧಿ ಯೋಜನೆಯ ಬದಲಾಗಿ, ಕೇಂದ್ರ ಸರ್ಕಾರದ ನೌಕರರಿಗೆ ಹೊಸದಾಗಿ ಪ್ರಾರಂಭಿಸ ಲಾಗಿರುವ ಸಮೂಹ ವಿಮಾ ಯೋಜನೆಯನ್ನು ಅನ್ವಯಮಾಡುವ ಬಗ್ಗೆ ಸರ್ಕಾರವು ಈಗ ಪರಿಶೀಲಿಸುತ್ತಿದೆ. ಕರ್ನಾಟಕ ಸರ್ಕಾರಿ ನೌಕರರ ಸಂಘವು ಅನೇಕ ಮನವಿ ಹಾಗೂ ಸಲಹೆಗಳನ್ನು ಮುಂದಿಟ್ಟಿದೆ. ಈ ಮನವಿಗಳಿಗೆ ಸರ್ಕಾರವು ತೀವ್ರ ಗಮನ ನೀಡುತ್ತಿದೆ ಹಾಗೂ ಮನವಿಗಳನ್ನು ಪರಿಶೀಲಿಸಲು ಮಂತ್ರಿಮಂಡಲದ ಉಪ ಸಮಿತಿಯೊಂದನ್ನು ರಚಿಸಲಾಗಿದೆ. ಇದರಿಂದ ನೌಕರರ ಹಿತದೃಷ್ಟಿಯಿಂದ ಶೀಘ್ರ ನಿರ್ಧಾರ ತೆಗೆದುಕೊಳ್ಳಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ. ಇನ್ನು ಮುಂದೆ ಸರ್ಕಾರಿ ನೌಕರರಿಗೆ ಹಾಗೂ ಸರ್ಕಾರದಿಂದ ಆರ್ಥಿಕ ನೆರವು ಪಡೆಯುತ್ತಿರುವ ಸಂಸ್ಥೆ ಗಳ ನೌಕರರಿಗೆ ಸಂದಾಯವಾಗಬೇಕಾದ ಯಾವುದೇ ತುಟ್ಟಿಭತ್ಯ ಏರಿಕೆಗೆ ಸಂಬಂಧ ಪಟ್ಟಂತೆ ಕೇಂದ್ರ ಸರ್ಕಾರವು ಘೋಷಣೆ ಮಾಡಿದಾಗಲೆಲ್ಲಾ ರಾಜ್ಯ ಸರ್ಕಾರವೂ ಘೋಷಿಸುತ್ತದೆ. ಸರ್ಕಾರಿ ನೌಕರರ ಕಲ್ಯಾಣಕಾರ್ಯ ಚಟುವಟಿಕೆಗಳಲ್ಲಿ ಹೆಚ್ಚಿನ ರೀತಿಯಲ್ಲಿ ಭಾಗವಹಿಸುವ ದೃಷ್ಟಿಯಿಂದ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರ ಸ್ಥಳಗಳಲ್ಲಿ ಸರ್ಕಾರಿ ನೌಕರರ ಗೃಹಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ನೀಡಲಾಗಿರುವ ಧನ ಸಹಾಯವನ್ನು ಇನ್ನಷ್ಟು ಹೆಚ್ಚಿಸುತ್ತದೆ.

38. ನಿವೃತ್ತ ಸರ್ಕಾರಿ ನೌಕರರು ಮತ್ತು ಸಂಕಷ್ಟದಲ್ಲಿರುವ ಇತರೆ ವೃದ್ಧರು ಹಾಗೂ ಅಂಗವಿಕಲರಿಗೆ ಸಾಮಾಜಿಕ ಭದ್ರತೆಯ ಸೌಲಭ್ಯವನ್ನೊದಗಿಸುವುದರಲ್ಲಿ ನಮ್ಮ ರಾಜ್ಯವೇ ಮೊಟ್ಟಮೊದಲನೆಯದಾಗಿದೆಯೆಂದು ಹೆಮ್ಮೆಯಿಂದ ಹೇಳಿಕೊಳ್ಳ ಬಹುದಾಗಿದೆ. ನಿವೃತ್ತ ಪುರಸಭಾ ನೌಕರರಿಗೆ ಮತ್ತು ಸರ್ಕಾರದಿಂದ ನೆರವು ಪಡೆದ ಶಿಕ್ಷಣ ಸಂಸ್ಥೆಗಳ ನೌಕರರಿಗೆ ನಿವೃತ್ತಿ ವೇತನವನ್ನು ನೀಡುವುದರ ಜೊತೆಗೆ ವೃದ್ಧಾಪ್ಯ ವೇತನ, ದೈಹಿಕವಾಗಿ ದುರ್ಬಲರಾದವರಿಗೆ ನಿವೃತ್ತಿ ವೇತನ, ರಾಜಕೀಯ ಸಂತ್ರಸ್ತರಿಗೆ ಹಾಗೂ ಪ್ರತಿಭಾನ್ವಿತ ಕಲಾವಿದರಿಗೆ ಮತ್ತು ಸಂಕಷ್ಟಕ್ಕೀಡಾದ ಕಲಾವಿದರಿಗೆ ನಿವೃತ್ತಿ ವೇತನಗಳನ್ನು ನೀಡಲಾಗಿದೆ. ಈ ಸೌಲಭ್ಯಗಳನ್ನು ಸಕಾಲದಲ್ಲಿ ನೀಡಿರುವುದರಿಂದಾಗಿ ಈ ವರ್ಷದ ಪ್ರಾರಂಭದಿಂದಲೇ ವರ್ಷಕ್ಕೆ 65 ಕೋಟಿ ರೂಪಾಯಿಗಳ ಹೊಣೆಗಾರಿಕೆ ಯನ್ನು ಸರ್ಕಾರ ವಹಿಸಿಕೊಂಡಿದೆ.

39.1. ಶ್ರವಣಬೆಳಗೊಳದಲ್ಲಿ ಜಗತ್ಪ್ರಸಿದ್ಧ ಬಾಹುಬಲಿಯ ಏಕಶಿಲಾ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಸಹಸ್ರ ವರ್ಷಗಳ ಸಮಾರಂಭ ಜರುಗಿತು. ಯಾತ್ರಿಕರು ಬಹುಸಂಖ್ಯೆಯಲ್ಲಿ ಬರಬಹುದೆಂದು ಸರ್ಕಾರವು ಶ್ರವಣಬೆಳಗೊಳದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ

ಬೆಂಬಲ ನೆರವನ್ನು ಒದಗಿಸಿತ್ತು. ರಸ್ತೆಗಳ ನಿರ್ಮಾಣ, ಕುಡಿಯುವ ನೀರಿನ ಸರಬರಾಜು ಸೌಲಭ್ಯ ಮತ್ತು ಶ್ರವಣಬೆಳಗೊಳದ ಸುಧಾರಣೆಗಳಿಂದಾಗಿ ಆ ಪಟ್ಟಣಕ್ಕೆ ಬಹುಕಾಲದಿಂದ ಅಗತ್ಯವಿದ್ದ ಹೊಸ ಶೋಭೆ ಉಂಟಾಗಿದೆ. ಶ್ರವಣಬೆಳಗೊಳದ ದಿಗಂಬರ ಜೈನ ಮುಜರಾಯಿ ಸಂಸ್ಥೆಗಳ ಸಹಕಾರದಿಂದ ಆ ಪಟ್ಟಣಕ್ಕೆ ಭೇಟಿ ನೀಡಿದ ಲಕ್ಷಾಂತರ ಯಾತ್ರಿಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ವಿಶೇಷ ಆಸಕ್ತಿವಹಿಸಲಾಯಿತು. ಶ್ರವಣಬೆಳಗೊಳದಲ್ಲಿ ನಡೆದ ಸಮಾರಂಭಗಳು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಮನೋಜ್ಞವಾಗಿ ಬಿಂಬಿಸಿದವು. ಇವು ಅಂತರರಾಷ್ಟ್ರೀಯ ಗಮನವನ್ನೂ ಸೆಳೆದುವು.

39.2. ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಪುನಶ್ಚೇತನಗೊಳಿಸುವ ಮತ್ತೊಂದು ಅಂಗವಾಗಿ ಮಧ್ಯಯುಗದ ಜಗತ್ಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪೆಯ ಜೀರ್ಣೋದ್ಧಾರ ಕಾರ್ಯವನ್ನು ಮುಂದಿನ ವರ್ಷ ನಾವು ಕೈಗೊಳ್ಳಲಿದ್ದೇವೆ. ಭಾರತದ ಪ್ರಾಚ್ಯ ವಸ್ತು ಸಮೀಕ್ಷೆ ಮತ್ತು ರಾಜ್ಯ ಪ್ರಾಚ್ಯವಸ್ತು ಇಲಾಖೆಯ ನಿಕಟ ಸಹಕಾರದೊಂದಿಗೆ ಕ್ರಿ.ಶ. 1500 ರ ಸುಮಾರಿನಲ್ಲಿ ಇದ್ದಿರಬಹುದಾದ ಪರಿಸರವನ್ನು ಮತ್ತೆ ಮೂಡಿಸಲು ಪ್ರಯತ್ನಿಸಲಾಗುವುದು. ಇಂದು ಪ್ರವಾಸಿಗಳು ಫತೇಪುರ ಸಿಕ್ರಿಯನ್ನು ಅಥವಾ ಫ್ರಾನ್ಸಿನ ವಾರ್ಸೇಲ್ಸನ್ನು ಸಂದರ್ಶಿಸಿದಾಗ ಅವರಿಗೆ ಯಾವ ರೀತಿ ಗತವೈಭವದ ನೆನಪುಗಳು ಮರುಕಳಿಸುತ್ತವೆಯೋ ಅದೇ ರೀತಿಯಲ್ಲಿ ಜೀರ್ಣೋದ್ಧಾರಗೊಂಡ ಹಂಪೆ ಪಟ್ಟಣವು ಕಾಲ ಕ್ರಮೇಣ ನೆನಪು ಮರುಕಳಿಸುವಂತೆ ಮಾಡಬಹುದೆಂದು ನಿರೀಕ್ಷಿಸಲಾಗಿದೆ.

39.3. 1982 ರಲ್ಲಿ ಮೈಸೂರಿನಲ್ಲಿ ನಡೆಯಲಿರುವ ವಿಶ್ವಕನ್ನಡ ಸಮ್ಮೇಳನಕ್ಕಾಗಿ ಪೂರ್ವಭಾವಿ ಕಾರ್ಯಗಳನ್ನು ಪ್ರಾರಂಭಿಸಲಾಗುವುದು. ಮೈಸೂರಿನಲ್ಲಿ ನಡೆಯುವ ದಸರಾ ಉತ್ಸವವನ್ನು ಪುನಃ ಪ್ರಾರಂಭಿಸಲಾಗಿದ್ದು ಇದನ್ನು ಪ್ರತಿ ವರ್ಷವೂ ಮುಂದುವರಿಸಿಕೊಂಡು ಬರಲಾಗುವುದು. ಈ ಸಂದರ್ಭದಲ್ಲಿ ಮೈಸೂರನ್ನೇ ಕೇಂದ್ರ ಸ್ಥಳವನ್ನಾಗಿಟ್ಟುಕೊಂಡು ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಲಲಿತ ಕಲೆಗಳ ಪುನರುಜ್ಜೀವನ ಕಾರ್ಯವನ್ನು ಕೈಕೊಳ್ಳಲಾಗುವುದು.

40.1. ಕಳೆದ ವರ್ಷದ ಭಾಷಣದಲ್ಲಿ ನಾನು, ರಾಜ್ಯದಲ್ಲಿ, ಅದರಲ್ಲಿಯೂ ವಿಶೇಷವಾಗಿ ಬೆಂಗಳೂರು ನಗರದಲ್ಲಿರುವ ಸಾರಿಗೆ ವ್ಯವಸ್ಥೆಯ ಬಗ್ಗೆ ನಮ್ಮ ಕಳಕಳಿಯನ್ನು ಸ್ಪಷ್ಟಪಡಿಸಿದ್ದೆ. ಈ ವರ್ಷ ಕರ್ನಾಟಕ ರಸ್ತೆ ಸಾರಿಗೆ ನಿಗಮವು 602 ಛಾಸಿಗಳನ್ನು ಪಡೆದುಕೊಂಡಿದ್ದು ಅವುಗಳಲ್ಲಿ 412 ಛಾಸಿಗಳನ್ನು ಬಸ್ಸುಗಳನ್ನಾಗಿ ಪರಿವರ್ತಿಸಿದೆ. 1981-82 ರಲ್ಲಿ ಇನ್ನೂ ಹೆಚ್ಚು ಹೆಚ್ಚು ಛಾಸಿಗಳು ಹಾಗೂ ಬಸ್ ಬಾಡಿ ತಯಾರಿಕಾ ಸಂಸ್ಥೆಗಳಿಂದ 900 ಬಸ್ಸುಗಳು ಬರುವ ನಿರೀಕ್ಷೆಯಿಂದೆ. ವಾಹನಗಳ ಬಳಕೆಯನ್ನು ಹೆಚ್ಚಿಸುವ ಬಗ್ಗೆ, ಡೀಸೆಲ್ ಬಳಕೆಯನ್ನು ಕಡಿಮೆ ಮಾಡುವ ಬಗ್ಗೆ, ಟೈರ್ ಸವೆತವನ್ನು ಆದಷ್ಟು ಕಡಿಮೆ ಮಾಡುವ ಬಗೆ ಕ್ರಮ ಕೈಕೊಳ್ಳಲಾಗುವುದು ಮತ್ತು ಈ ಕ್ರಮಗಳ ಫಲಿತಾಂಶಗಳನ್ನು ಮುಂಬರುವ ವರ್ಷದಲ್ಲಿ ನೋಡಬಹುದು. ಕಳೆದ ಒಂದು ವರ್ಷದಲ್ಲಿ ಪ್ರತಿದಿನ 9.23 ಲಕ್ಷ ಕಿಲೋಮೀಟರ್ ಆಗಿದ್ದ ಬಸ್ ಸಂಚಾರದ ಪ್ರಮಾಣವು ಈಗ ಪ್ರತಿದಿನ 10.40 ಕಿಲೋಮೀಟರುಗಳಿಗೇರಿದೆ. ಪ್ರಯಾಣಿಕರ ಸಂಖ್ಯೆಯು ದಿನಕ್ಕೆ 21·32

ಲಕ್ಷ ಇದ್ದುದು ಈ ವರ್ಷ 25 ಲಕ್ಷಕ್ಕೇರಿದೆ. ಪಂಚವಾರ್ಷಿಕ ಯೋಜನೆಯ ಆಧಾರದ ಮೇಲೆ, 1980 ರ ಮಾರ್ಚಿ 31 ರಂದು ಇದ್ದ 3,602 ಬಸ್‌ಗಳ ಸಂಖ್ಯೆಯನ್ನು 1985 ರ ಮಾರ್ಚಿ 31 ಕ್ಕೆ 5,783 ಕ್ಕೆ ಹೆಚ್ಚಿಸಲು ಯೋಚಿಸಲಾಗಿದೆ.

